# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 988

ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 24.07.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಹೊಸದಾಗಿ ತಾಲೂಕು ಕೇಂದ್ರ ಬಸ್ ನಿಲ್ದಾಣ ಸ್ಥಾಪಿಸಿ ಕಾರ್ಯಾರಂಭಗೊಳಿಸಲು ಇರುವ ನಿಯಮಗಳೇನು? ಪ್ರಸ್ತುತ ಎಷ್ಟು ಹೊಸ ಬಸ್ಸು ನಿಲ್ದಾಣಗಳ ನಿರ್ಮಾಣಕ್ಕೆ ಪ್ರಸ್ತಾವನೆ ಸರಕಾರದ ಮುಂದಿದೆ; (ವಿವರ ನೀಡುವುದು) | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಸುತ್ತೋಲೆ ಸಂಖ್ಯೆ: 01/2015-16, ದಿನಾಂಕ: 06.06.2015ರನ್ವಯ ಹೊಸದಾಗಿ ತಾಲೂಕು ಕೇಂದ್ರ ಬಸ್ ನಿಲ್ದಾಣ ಸ್ಥಾಪಿಸಿ ಕಾರ್ಯಾರಂಭಗೊಳಿಸಲು ಮಾರ್ಗಸೂಚಿಗಳ ಸುತ್ತೋಲೆಯನ್ನು **'ಅನುಬಂಧ 'ಅ'**ರಲ್ಲಿ ನೀಡಲಾಗಿದೆ.<br><br>**ಕ.ರಾ.ರ.ಸಾ.ನಿಗಮದ** ವ್ಯಾಪ್ತಿಯಲ್ಲಿ ಪ್ರಸ್ತುತ ಗುಬ್ಬಿ, ತರೀಕೆರೆ ಮತ್ತು ಬಸರಾಳುವಿನಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಇರುತ್ತದೆ. ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಬಸ್ ನಿಲ್ದಾಣ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.<br><br>**ವಾ.ಕ.ರ.ಸಾ.ಸಂಸ್ಥೆಯ** ವತಿಯಿಂದ ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕೆ ಪ್ರಸ್ತಾವನೆ ಇರುವುದಿಲ್ಲ.<br><br>**ಕ.ಕ.ರ.ಸಾ.ನಿಗಮದ** ವ್ಯಾಪ್ತಿಯಲ್ಲಿಯ ತಾಲೂಕು ಕೇಂದ್ರಗಳಲ್ಲಿ ಈ ಕೆಳಕಂಡ ಬಸ್ ನಿಲ್ದಾಣಗಳ ನಿರ್ಮಾಣದ ಪ್ರಸ್ತಾವನೆಗಳಿರುತ್ತವೆ:-<br>• ಮಾನವಿಯಲ್ಲಿ ಎಕ್ಸ್‌ಪ್ರೆಸ್ ಬಸ್ ನಿಲ್ದಾಣ ನಿರ್ಮಿಸುವುದು.<br>• ಕೊಟ್ಟೂರಿನಲ್ಲಿ ಬಸ್ ನಿಲ್ದಾಣ ಮರು ನಿರ್ಮಿಸುವುದು.<br>• ಹುಲಸೂರಿನಲ್ಲಿ ಬಸ್ ನಿಲ್ದಾಣ ಮರು ನಿರ್ಮಿಸುವುದು.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-**<br>ಸಂಸ್ಥೆಯಲ್ಲಿ 2024-25ನೇ ಸಾಲಿನಲ್ಲಿ ಹೊಸದಾಗಿ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ. |
| ಆ. | ಉಡುಪಿ ಜಿಲ್ಲೆ ಬೈಂದೂರು ತಾಲೂಕು ಕೇಂದ್ರ ಬಸ್ ನಿಲ್ದಾಣ ನಿರ್ಮಾಣ ಯೋಜನೆಯ ಯೋಜನಾ ಅಂದಾಜು ಹಾಗೂ ಟೆಂಡರ್ ಮೊತ್ತವೆಷ್ಟು? ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು ಯಾರು ಈವರೆಗೆ ಗುತ್ತಿಗೆದಾರರಿಗೆ ಪಾವತಿಸಿದ ಹಾಗೂ ಪಾವತಿಸಲು | ಉಡುಪಿ ಜಿಲ್ಲೆಯ ಬೈಂದೂರಿನಲ್ಲಿ ಬಸ್ ನಿಲ್ದಾಣವನ್ನು 2018-19ನೇ ಸಾಲಿನ ಬಂಡವಾಳ ವೆಚ್ಚ ಮತ್ತು ನಗರ ಭೂಸಾರಿಗೆ ನಿರ್ದೇಶನಾಲಯದ ಅನುದಾನದ (DULT) ಅಡಿಯಲ್ಲಿ ರೂ.598.00 ಲಕ್ಷಗಳ ವೆಚ್ಚದಲ್ಲಿ ಮೊದಲ ಹಂತದಲ್ಲಿ ನಿರ್ಮಿಸಲಾಗಿದೆ.<br><br>ಒಟ್ಟು ಯೋಜನಾ ಅಂದಾಜು ವೆಚ್ಚ:<br>ರೂ.598.00 ಲಕ್ಷ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಬಾಕಿಯಿರುವ ಮೊತ್ತವೆಷ್ಟು ಈವರೆಗೆ ಈ ಕಾಮಗಾರಿ ಪೂರ್ಣಗೊಳಿಸಿ ನಿಲ್ದಾಣವನ್ನು ಸಾರ್ವಜನಿಕ ಸೇವೆಗೆ ಮುಕ್ತಗೊಳಿಸದಿರಲು ಕಾರಣವೇನು ಈ ಬಸ್ ನಿಲ್ದಾಣ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ಪ್ರಯಾಣಿಕರ ಬಳಕೆಗೆ ಮುಕ್ತಗೊಳಿಸಲಾಗುವುದು; | ಮಂಜೂರಾದ ಒಟ್ಟು ಟೆಂಡರ್ ಮೊತ್ತ: ರೂ.598.29 ಲಕ್ಷ<br><br>ಗುತ್ತಿಗೆದಾರರು:<br><br>ಶ್ರೀ ಸುಜಯ್ ಕುಮಾರ್ ಶೆಟ್ಟಿ<br><br>ಪಾವತಿಸಿದ ಒಟ್ಟು ಬಿಲ್ ಮೊತ್ತ:<br><br>ಅನುಮೋದಿತ ಟೆಂಡರ್ ಮೊತ್ತ (ಜಿ.ಎಸ್.ಟಿ. ಸೇರಿದಂತೆ) ರೂ.583.67 ಲಕ್ಷ<br><br>ತಾಂತ್ರಿಕ ಶುಲ್ಕ ರೂ.14,32,835<br><br>ಹೀಗೆ ಒಟ್ಟು ರೂ.5,98,28,791 ಪಾವತಿಸಲಾಗಿದೆ.<br><br>ಆದ್ದರಿಂದ, ಯಾವುದೇ ಬಾಕಿ ಬಿಲ್ ಮೊತ್ತ ಇರುವುದಿಲ್ಲ.<br><br>ಮೊದಲನೇ ಹಂತದ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು, ಎರಡನೇ ಹಂತದಲ್ಲಿ ರೂ.247.00 ಲಕ್ಷಗಳ ವೆಚ್ಚದಲ್ಲಿ ಬಸ್ ನಿಲ್ದಾಣದ ಅಭಿವೃದ್ಧಿ ಕೆಲಸಗಳಾದ ಆವರಣಕ್ಕೆ ಕಾಂಕ್ರೀಟ್ ಅಳವಡಿಸುವುದು ಹಾಗೂ ಇತರೆ ಅಭಿವೃದ್ಧಿ ಕೆಲಸಗಳ ಟೆಂಡರ್‌ಗೆ ಅನುಮೋದನೆ ನೀಡಲಾಗಿದ್ದು, ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.<br><br>ಸದರಿ ಅಭಿವೃದ್ಧಿ ಕಾಮಗಾರಿ ಕೆಲಸಗಳನ್ನು ಟೆಂಡರ್‌ನಲ್ಲಿ ನಿಗದಿಪಡಿಸಿದ ಮಳೆಗಾಲ ಹೊರತುಪಡಿಸಿ 03 ತಿಂಗಳ ಕಾಲಾವಧಿಯೊಳಗೆ ಪೂರ್ಣಗೊಳಿಸಿ, ನಂತರ ಪ್ರಯಾಣಿಕರ ಬಳಕೆಗೆ ಮುಕ್ತಗೊಳಿಸಲಾಗುವುದು. |
| ಇ. | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಷ್ಟು ಬಸ್ಸು ನಿಲ್ದಾಣಗಳಿವೆ? ಮತ್ತು ಯಾವ ಯಾವ ನಿಲ್ದಾಣಗಳಿಗೆ ಸರಕಾರಿ ಬಸ್ಸುಗಳು ಬರುತ್ತವೆ ಇನ್ನು ಎಷ್ಟು ನಗರಗಳಿಗೆ ಸರಕಾರಿ ಬಸ್ಸು ನಿಲ್ದಾಣ ಅಗತ್ಯವಿದೆ ಈ ಅಗತ್ಯ ಇರುವ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಸರಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು 12 ಬಸ್ಸು ನಿಲ್ದಾಣಗಳಿದ್ದು, ವಿವರ ಕೆಳಕಂಡಂತಿದೆ:- |

| ಕ್ರ. ಸಂ. | ಬಸ್ಸು ನಿಲ್ದಾಣಗಳ ಹೆಸರು |
|---|---|
| 1. | ಮಂಗಳೂರು |
| 2. | ಬಿ.ಸಿ.ರೋಡ್ |
| 3. | ಸುಳ್ಯ |
| 4. | ಧರ್ಮಸ್ಥಳ |
| 5. | ಸುಬ್ರಮಣ್ಯ |
| 6. | ಪುತ್ತೂರು |
| 7. | ವಿಟ್ಲ |
| 8. | ನೆಲ್ಯಾಡಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | <table><tr><td>9.</td><td>ಉಜಿರೆ</td></tr><tr><td>10.</td><td>ಉಡುಪಿ ನಗರ ಸಾರಿಗೆ ಬಸ್ ನಿಲ್ದಾಣ,</td></tr><tr><td>11.</td><td>ಉಡುಪಿ ಗ್ರಾಮಾಂತರ ಬಸ್ ನಿಲ್ದಾಣ</td></tr><tr><td>12.</td><td>ಕುಂದಾಪುರ</td></tr></table><br>ಸದರಿ ಬಸ್ ನಿಲ್ದಾಣಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಬರುವ ನೆಲ್ಯಾಡಿಯಲ್ಲಿ ಹೆದ್ದಾರಿ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಪ್ರಸ್ತುತ ನೆಲ್ಯಾಡಿ ಬಸ್ಸು ನಿಲ್ದಾಣಕ್ಕೆ ಬಸ್ಸುಗಳು ಬರಲು ಅನಾನುಕೂಲವಾಗಿರುತ್ತದೆ. ಇನ್ನುಳಿದ ಬಸ್ಸು ನಿಲ್ದಾಣಗಳ ಮೂಲಕ ನಿಗಮದ ಸಾರಿಗೆಗಳು ಕಾರ್ಯಾಚರಣೆಯಾಗುತ್ತಿವೆ.<br><br>ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗುತ್ತಿದೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಉಪ್ಪಿನಂಗಡಿ, ಮುಡಿಪು, ಸುರತ್ಕಲ್, ಮುಲ್ಕಿ ಹಾಗೂ ಮೂಡಬಿದಿರೆಯಲ್ಲಿ ಬಸ್ ನಿಲ್ದಾಣದ ಅಗತ್ಯವಿರುತ್ತದೆ.<br><br>ನಿವೇಶನ ದೊರೆತ ನಂತರ, ಆರ್ಥಿಕ ಲಭ್ಯತೆಯನ್ನು ಆಧರಿಸಿ ಹಾಗೂ ಸಾರಿಗೆ ಅವಶ್ಯಕತೆಗನುಗುಣವಾಗಿ ಬಸ್ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಆದ್ಯತೆ ಮೇರೆಗೆ ಪರಿಶೀಲಿಸಲಾಗುವುದು. |
| ಈ. | ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಮಾರ್ಗಗಳು ಅಭಿವೃದ್ಧಿಯಾಗಿದ್ದು ಅವುಗಳಿಗೆ ಬಸ್ಸಿನ ಕೊರತೆಯಿರುವ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ ಈ ಕುರಿತು ಮಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಇಲಾಖೆಯೊಂದಿಗೆ ವಿಚಾರ ವಿನಿಮಯ ನಡೆಸಿದೆಯೇ? ಈ ಕುರಿತು ಸರಕಾರದ ಪರಿಹಾರ ಕ್ರಮಗಳೇನು? (ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿದೆ.<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.**<br><br>ಮಂಗಳೂರು ನಗರ/ಗ್ರಾಮಾಂತರ ವ್ಯಾಪ್ತಿಯಲ್ಲಿ ಮಂಗಳೂರು ನಗರ ವ್ಯಾಪ್ತಿಯಲ್ಲಿ ಹೊಸದಾಗಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲು ಪರವಾನಗಿಗಳು ಅವಶ್ಯಕವಾಗಿದ್ದು, ಬೇಡಿಕೆಯಿರುವ 40 ಮಾರ್ಗಗಳಲ್ಲಿ 12 ಮಾರ್ಗಗಳ 14 ಪರವಾನಗಿಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯಿದ್ದು, ತಡೆಯಾಜ್ಞೆ ತೆರವುಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. 20 ಮಾರ್ಗಗಳಿಗೆ ಪಕ್ಕಾ ಪರವಾನಗಿ ಮಂಜೂರಾತಿ ಬಾಕಿಯಿರುತ್ತದೆ. ಇನ್ನುಳಿದ 08 ಮಾರ್ಗಗಳಿಗೆ ಪರವಾನಗಿ ಕೋರಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಉಳಿದಂತೆ, ಪ್ರಸ್ತುತ ಮಂಗಳೂರು ಮತ್ತು ಪುತ್ತೂರು ವಿಭಾಗಗಳಲ್ಲಿ ಚಾಲನಾ ಸಿಬ್ಬಂದಿಗಳ ಕೊರತೆಯಿದ್ದು, ನಿಗಮದಲ್ಲಿ ಚಾಲನಾ ಸಿಬ್ಬಂದಿಯ ನೇರ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಪರವಾನಗಿಗಳು ಮಂಜೂರಾಗಿ, ಸಿಬ್ಬಂದಿ ನಿಗಮಕ್ಕೆ ಸೇರ್ಪಡೆಯಾದ ನಂತರ ಬೇಡಿಕೆ ಇರುವ ಮಾರ್ಗಗಳಲ್ಲಿ ಪರಿಶೀಲಿಸಿ ಆದ್ಯತೆ ಮೇರೆಗೆ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಹೊಸದಾಗಿ ಸಾರಿಗೆ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.<br><br>ನಿಗಮದಲ್ಲಿ 2023-24ನೇ ಸಾಲಿನಲ್ಲಿ ಹಾಗೂ 2024-25ರ ಜೂನ್‌ವರೆಗೆ ಸೇರ್ಪಡೆ ಮಾಡಲಾದ ಹಾಗೂ 2024-25ನೇ ಸಾಲಿನಲ್ಲಿ ಸೇರ್ಪಡೆಗೊಳಿಸಲಾಗುತ್ತಿರುವ ಬಸ್ಸುಗಳ ವಿವರ ಈ ಕೆಳಕಂಡಂತಿದೆ:-<br><br>(ಕೆಳಗಿನ ಕೋಷ್ಟಕ ನೋಡಿ)<br><br>ನಿಗಮದಲ್ಲಿ ಮೇ-2024ರ ಅಂತ್ಯಕ್ಕೆ 8058 ಹುದ್ದೆಗಳು ಖಾಲಿಯಿದ್ದು, ಬಡ್ತಿಗೆ ಮೀಸಲಾಗಿರುವ ಖಾಲಿ ಹುದ್ದೆಗಳನ್ನು ಆಗಿಂದಾಗ್ಗೆ ಭರ್ತಿಗೊಳಿಸಲಾಗುತ್ತಿದ್ದು, ಪ್ರಸ್ತುತ ಬಡ್ತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>2000 ಚಾಲಕ-ಕಂ-ನಿರ್ವಾಹಕರ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ಪ್ರಸ್ತುತ ಸದರಿ ಹುದ್ದೆಗಳ ಮೂಲ ದಾಖಲಾತಿ ಪರಿಶೀಲನಾ ಕಾರ್ಯ ಚಾಲ್ತಿಯಲ್ಲಿದ್ದು, ತ್ವರಿತವಾಗಿ ನೇಮಕಾತಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. |

| ಸೇರ್ಪಡೆಯಾದ ವಾಹನಗಳ ಸಂಖ್ಯೆ | ಸೇರ್ಪಡೆಗೊಳಿಸಲಾಗುತ್ತಿರುವ ವಾಹನಗಳ ಸಂಖ್ಯೆ |
|---|---|
| 922 | 616 |

ಸಂಖ್ಯೆ: ಟಿಡಿ 143 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕಾಮಗಾರಿ ಇಲಾಖೆ:**
**ಕೇಂದ್ರ ಕಛೇರಿ: ಬೆಂಗಳೂರು**

ಸಂಖ್ಯೆ: ಕರಾಸಾ/ಕೇಕ/ಕಾಮಗಾರಿ ಇಲಾಖೆ/345/2015-16 ದಿನಾಂಕ:06-06-2015.

**ಪರಿಷ್ಕೃತ ಸುತ್ತೋಲೆ ಸಂಖ್ಯೆ: 01/2015-16**

ವಿಷಯ: ಸಾರಿಗೆ ನಿಗಮಗಳಲ್ಲಿ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬಸ್ ನಿಲ್ದಾಣ/ಬಸ್ ಘಟಕ/ವಿಭಾಗೀಯ ಕಛೇರಿ ನಿರ್ಮಾಣ ಕುರಿತಂತೆ ಮಾರ್ಗಸೂಚಿಯನ್ನು(Norms & Guidelines) ಅಳವಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 425ನೇ ಮಂಡಳಿ ಸಭೆಯ ಠರಾವು ಸಂಖ್ಯೆ:9677, ದಿನಾಂಕ:04.04.2015

* * * * * *

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ತನ್ನ ವ್ಯಾಪ್ತಿಯಲ್ಲಿ ಬಸ್ ನಿಲ್ದಾಣ/ಬಸ್ ಘಟಕ/ವಿಭಾಗೀಯ ಕಾರ್ಯಾಗಾರ/ವಿಭಾಗೀಯ ಕಛೇರಿ/ಪ್ರಾದೇಶಿಕ ಕಾರ್ಯಾಗಾರ/ತರಬೇತಿ ಕೇಂದ್ರಗಳು ಹಾಗೂ ನೌಕರರ/ಅಧಿಕಾರಿಗಳ ವಸತಿಗೃಹಗಳನ್ನು ನಿರ್ಮಿಸಿ ಸೌಲಭ್ಯವನ್ನು ಕಲ್ಪಿಸುತ್ತಿರುತ್ತದೆ. ಈ ಮೂಲಭೂತ ಸೌಕರ್ಯಗಳ ಬಗ್ಗೆ ದಿನಾಂಕ:04-12-2014 ರಂದು ನಡೆದ ಸಾರಿಗೆ ನಿಗಮದ 424ನೇ ಮಂಡಳಿ ಸಭೆಯಲ್ಲಿ ನಿಗಮಗಳಲ್ಲಿ ಬಸ್ ನಿಲ್ದಾಣ/ಬಸ್ ಘಟಕಗಳನ್ನು ನಿರ್ಮಿಸುವ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಈ ಮಂಡಳಿ ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರು ಮಾತನಾಡಿ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬಸ್ ನಿಲ್ದಾಣ/ ಬಸ್ ಘಟಕ ನಿರ್ಮಿಸುವಾಗ ಅಗತ್ಯಕ್ಕೆ ತಕ್ಕಂತೆ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವಂತೆ ಹಾಗೂ ಬಸ್ ನಿಲ್ದಾಣ/ ಬಸ್ ಘಟಕ ನಿರ್ಮಾಣ ಕುರಿತಂತೆ ಮಾರ್ಗಸೂಚಿಯನ್ನು(Norms & Guidelines) ಅಳವಡಿಸಿಕೊಳ್ಳುವಂತೆ ಸೂಚಿಸಿದರು.

ಅದರಂತೆ, ಮಂಡಳಿ ಸಭೆಯು ವಿವರವಾಗಿ ಚರ್ಚಿಸಿ, ಮಾರ್ಗಸೂಚಿಯನ್ನು ತಯಾರಿಸಲು ನಿರ್ಣಯಿಸಿರುತ್ತದೆ. ಮಂಡಳಿ ಸಭೆಯ ನಿರ್ಣಯದಂತೆ ಬಸ್ ನಿಲ್ದಾಣ/ಬಸ್ ಘಟಕ ನಿರ್ಮಿಸಲು ಮಾರ್ಗಸೂಚಿಯನ್ನು (Norms & Guidelines) ಪ್ರಧಾನ ವ್ಯವಸ್ಥಾಪಕರು(ಸಂಚಾರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:06-01-2015, 23-01-2015 ಹಾಗೂ 09-02-2015 ರಂದು 4 ಸಾರಿಗೆ ನಿಗಮಗಳ ಉನ್ನತ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿ, ನಿಗಮದ ಬಸ್ ನಿಲ್ದಾಣ/ಬಸ್ ಘಟಕಗಳನ್ನು ನಿರ್ಮಿಸಲು ಅಳವಡಿಸಿಕೊಳ್ಳಬೇಕಾದ ಮಾರ್ಗಸೂಚಿಗಳ ಬಗ್ಗೆ ವರದಿಯನ್ನು ತಯಾರಿಸಿ, ದಿನಾಂಕ:04-04-2015 ರಂದು ನಡೆದ 425ನೇ ಮಂಡಳಿ ಸಭೆಗೆ ಮಂಡಿಸಲಾಗಿ, ಮಂಡಳಿ ಸಭೆಯು ವರದಿಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಾರಿಗೆ ನಿಗಮಗಳಲ್ಲಿ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಬಸ್ ನಿಲ್ದಾಣ/ಬಸ್ ಘಟಕ/ವಿಭಾಗೀಯ ಕಛೇರಿಗಳನ್ನು ನಿರ್ಮಿಸುವುದರ ಬಗ್ಗೆ ಉದ್ದೇಶಿತ ಮಾರ್ಗಸೂಚಿಯ ಪ್ರಕಾರ ಕ್ರಮ ಕೈಗೊಳ್ಳುವಂತೆ ಮಂಡಳಿ ಸಭೆಯ ಠರಾವು ಸಂಖ್ಯೆ:9677ರ ಮೂಲಕ ಒಪ್ಪಿಗೆ ನೀಡಿರುತ್ತದೆ. ಸದರಿ ಸಭೆಗಳಲ್ಲಿ ನಡೆದ ಚರ್ಚೆಗೆ ಅನುಗುಣವಾಗಿ, ಹೋಬಳಿ/ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ ಬಸ್ ನಿಲ್ದಾಣ/ಬಸ್ ಘಟಕ/ವಿಭಾಗೀಯ ಕಛೇರಿಗಳ ನಿರ್ಮಾಣ ಮಾಡಲು ಅಳವಡಿಸಬೇಕಾದ ನೀತಿ ನಿಯಮಗಳು ಈ ಕೆಳಕಂಡಂತಿರುತ್ತವೆ.

ಅ. ಬಸ್ ಶೆಲ್ಟರ್‌ಗಳು:

ಸಾರಿಗೆ ನಿಗಮದ ವತಿಯಿಂದ ಯಾವುದೇ ಬಸ್ ಶೆಲ್ಟರ್‌ಗಳನ್ನು ನಿರ್ಮಿಸುವ ಕೆಲಸವನ್ನು ಕೈಗೊಳ್ಳಬಾರದು. ಬಸ್ ಶೆಲ್ಟರ್‌ಗಳನ್ನು ಸ್ಥಳೀಯ ಸಂಸ್ಥೆಗಳಾದ ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪುರಸಭೆ, ನಗರ ಸಭೆ, ಮಹಾನಗರ ಸಭೆ ಹಾಗೂ ಇನ್ನಿತರೆ ಸ್ಥಳೀಯ ಸಂಸ್ಥೆಗಳಿಂದ ನಿರ್ಮಿಸಿಕೊಳ್ಳುವುದು.

**ಅಥವಾ**

ಬಸ್ ಶೆಲ್ಟರ್‌ಗಳನ್ನು ನಿರ್ಮಿಸಲು ಸ್ಥಳೀಯ ಸಂಘ ಸಂಸ್ಥೆಗಳಿಂದ, ಸರ್ಕಾರದ ಸಂಸ್ಥೆಗಳಿಂದ, ಭೂ ಸಾರಿಗೆ ನಿರ್ದೇಶನಾಲಯ(DULT) ಇಂತಹ ಸಂಸ್ಥೆಗಳಿಂದ ಅನುದಾನ ದೊರೆತಲ್ಲಿ ಹಾಗೂ ಸಾರಿಗೆ ನಿಗಮದ ನಿವೇಶನ ಲಭ್ಯವಿದ್ದಲ್ಲಿ/ರಸ್ತೆ ಪಕ್ಕಗಳಲ್ಲಿ ಬಸ್ ಶೆಲ್ಟರ್ ಗಳನ್ನು ನಿರ್ಮಿಸಲು ಸ್ಥಳೀಯ ಸಂಸ್ಥೆಗಳು ಅನುಮತಿ ನೀಡಿದಲ್ಲಿ, ಸ್ಥಳೀಯ ಸಂಘ ಸಂಸ್ಥೆಗಳಿಂದ, ಸರ್ಕಾರದ ಸಂಸ್ಥೆಗಳಿಂದ, DULT ಇಂತಹ ಸಂಸ್ಥೆಗಳಿಂದ ಅನುದಾನ ಪಡೆದು ಸಾರಿಗೆ ಸಂಸ್ಥೆಗಳ ವತಿಯಿಂದ ನಿರ್ಮಿಸುವುದು.

ಆ. ಹೋಬಳಿ ಮಟ್ಟದ ಬಸ್ ನಿಲ್ದಾಣಗಳು:

1. ಕನಿಷ್ಠ 50 ಬಸ್‌ಗಳ ಆಗಮನ/ನಿರ್ಗಮನ ಇದ್ದಲ್ಲಿ ಮಾತ್ರ ಹೋಬಳಿ ಮಟ್ಟದಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು.
2. **ಹೋಬಳಿ ಮಟ್ಟದ ಬಸ್ ನಿಲ್ದಾಣಕ್ಕೆ ಕನಿಷ್ಠ 1 ಎಕರೆ ವಿಸ್ತೀರ್ಣದ ನಿವೇಶನವನ್ನು ಪಡೆಯುವುದು.**
3. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸರ್ಕಾರ/ಮಂಡಲ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿ ವತಿಯಿಂದ ಉಚಿತವಾಗಿ/ರಿಯಾಯಿತಿ ದರದಲ್ಲಿ ನಿವೇಶನವನ್ನು ಪಡೆಯುವುದು.
4. ಬಸ್ ನಿಲ್ದಾಣ ನಿರ್ಮಿಸುವ ನಿವೇಶನವು ಊರಿನ ಮಧ್ಯ ಭಾಗದಲ್ಲಿ ಅಥವಾ ಊರಿನ ಪ್ರಮುಖ ಸ್ಥಳದಲ್ಲಿರಬೇಕಾಗಿರುತ್ತದೆ. ಊರಿನ ಮಧ್ಯಭಾಗದಲ್ಲಿ ಖಾಸಗಿ ಬಸ್ ನಿಲ್ದಾಣವಿದ್ದಲ್ಲಿ, ಊರಿನ ಹೊರ ವಲಯದಲ್ಲಿ ಸಾರಿಗೆ ನಿಗಮದ ಬಸ್ ನಿಲ್ದಾಣ ನಿರ್ಮಿಸಬಾರದು.
5. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸುವಾಗ ಪ್ರಧಾನ ವ್ಯವಸ್ಥಾಪಕರು(ಸಂಚಾರ), ಮುಖ್ಯ ಅಭಿಯಂತರು, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಮುಖ್ಯ ಯಾಂತ್ರಿಕ ಅಭಿಯಂತರು(ನಿ), ಸಂಬಂಧಪಟ್ಟ ವಿಭಾಗ ನಿಯಂತ್ರಣಾಧಿಕಾರಿಗಳು ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಭಿಯಂತರನ್ನು ಒಳಗೊಂಡ ಸಮಿತಿಯು ನಿವೇಶನವನ್ನು ನಿರ್ಣಯಿಸಿ, ಮಂಡಳಿಯ ಅನುಮೋದನೆ ಪಡೆದು ನಿವೇಶನವನ್ನು ಪಡೆಯುವುದು.
6. ಬಸ್ ನಿಲ್ದಾಣ ನಿರ್ಮಾಣವನ್ನು ಆರಂಭಿಸುವ ಮುನ್ನವೇ ಸಂಬಂಧಪಟ್ಟ ನಿವೇಶನದ ಖಾತಾ ಇನ್ನಿತರೆ ದಾಖಲೆಗಳನ್ನು ಸಾರಿಗೆ ನಿಗಮದ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳುವುದು.
7. ಬಸ್ ನಿಲ್ದಾಣ/ಘಟಕ ಮುಂತಾದವುಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ನೀಡಿದ ಸಂದರ್ಭದಲ್ಲಿ ತಗ್ಗು ಪ್ರದೇಶ, ಎತ್ತರದ ಪ್ರದೇಶ, ಕೆರೆ ಆವರಣ ಮುಂತಾದ ಸಂದರ್ಭಗಳಲ್ಲಿ ತಗಲುವ ಅಭಿವೃದ್ಧಿ ವೆಚ್ಚಗಳನ್ನು

ಹಾಗೂ ಹೆಚ್.ಟಿ. ಲೈನ್ ಸ್ಥಳಾಂತರ, ಕೊಳವೆ ಸಾಲುಗಳ ಸ್ಥಳಾಂತರ, ನಿವೇಶನ ಒತ್ತುವರಿ ಮುಂತಾದವುಗಳನ್ನು ಪರಿಶೀಲಿಸಿ ಪಡೆದುಕೊಳ್ಳುವುದು.

8. ನಿರ್ಮಾಣಕ್ಕೆ ಮುನ್ನವೇ ಬಸ್ ನಿಲ್ದಾಣವನ್ನು ನಿರ್ಮಿಸಲು ಬೇಕಾದ ಕಾನೂನು ಬದ್ಧ ಅನುಮೋದನೆಗಳನ್ನು ಮತ್ತು ಇನ್ನಿತರೆ ಅವಶ್ಯಕತೆಗಳನ್ನು ಸ್ಥಳೀಯ ಸಂಸ್ಥೆಗಳಿಂದ ಪಡೆದುಕೊಳ್ಳುವುದು.

9. ಬಸ್ ನಿಲ್ದಾಣಗಳಿಗೆ ಸ್ಥಳದ ಹೆಸರನ್ನು ಹೆಸರಿಸಲು ಹಾಗೂ ಯಾವುದೇ ನಾಯಕರ/ಧರ್ಮದ/ವ್ಯಕ್ತಿಯ ಹೆಸರನ್ನು ಇಡದೇ ಇರಲು ಶಿಫಾರಸ್ಸು ಮಾಡಲಾಯಿತು. ಒಂದು ವೇಳೆ ನಾಯಕರ/ಧರ್ಮದ/ವ್ಯಕ್ತಿಯ ಹೆಸರನ್ನು ಇಡಬೇಕಾದ ಸಂದರ್ಭದಲ್ಲಿ, ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಅನುಮೋದನೆ ಪಡೆದು ಈ ಬಗ್ಗೆ ಕ್ರಮ ಜರುಗಿಸುವುದು.

10. ಯಾವುದೇ ಸ್ಥಳದಲ್ಲಿ ಬಸ್ ನಿಲ್ದಾಣವನ್ನು ಈಗಾಗಲೇ ನಿರ್ಮಿಸಿದ್ದು, ಕಾರ್ಯಾಚರಣೆಯಲ್ಲಿದ್ದಲ್ಲಿ ಪರ್ಯಾಯ ಬಸ್ ನಿಲ್ದಾಣವನ್ನು ನಿರ್ಮಿಸುವ ಅವಶ್ಯಕತೆ ಇರುವುದಿಲ್ಲ. ಒಂದು ವೇಳೆ ಬಸ್ ನಿಲ್ದಾಣವನ್ನು ನಿರ್ಮಿಸುವುದು ಅನಿವಾರ್ಯವಾದಲ್ಲಿ ಈ ಕೆಳಗಿನ ಷರತ್ತಿನಂತೆ ಸ್ಥಳಾಂತರಿಸುವುದು:

- ಖಾಸಗಿ ಬಸ್ ನಿಲ್ದಾಣ ನಗರದ ಮಧ್ಯ ಭಾಗದಲ್ಲಿ ಇದ್ದು, ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಹೊರ ಭಾಗದಲ್ಲಿ ಪ್ರಸ್ತಾಪಿಸಿದರೆ ಈ ರೀತಿಯ ಪ್ರಸ್ತಾವನೆಗಳು ಸಂಸ್ಥೆಯ ಹಿತದೃಷ್ಟಿಯಿಂದ ತಿರಸ್ಕರಿಸುವುದು.
- ಬಸ್ ನಿಲ್ದಾಣದ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಸಾಧಕ-ಬಾಧಕಗಳನ್ನು ಪರಿಶೀಲಿಸಿ Financial Viabilitiy ಬಗ್ಗೆ ಪರಿಶೀಲಿಸಿ ಮಂಡಳಿಯ ಅನುಮೋದನೆ ಹಾಗೂ ಸರ್ಕಾರದ ಅನುಮೋದನೆ ಪಡೆದು ಕ್ರಮ ಜರುಗಿಸುವುದು.

11. **ಹೋಬಳಿ ಮಟ್ಟದ ಬಸ್ ನಿಲ್ದಾಣಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ:**

1. ಪ್ರಯಾಣಿಕರ ಕಾಯುವಿಕೆ ಹಜಾರ: 36' x 20'=720 ಚ.ಅ.
2. ಸಂಚಾರ ನಿಯಂತ್ರಕರ ಕೊಠಡಿ: 12' x 20'=240 ಚ.ಅ.
3. **ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ**

    **ಅ) ಪುರುಷರು: ಎರಡು ಸಂಖ್ಯೆ ಶೌಚಾಲಯ**

    **ಮೂರು ಸಂಖ್ಯೆಯ ಮೂತ್ರಾಲಯ**

    **(ಕನಿಷ್ಠ ಸಂಖ್ಯೆಯಿದ್ದು, ಅವಶ್ಯಕತೆಗೆ ತಕ್ಕಂತೆ ಹೆಚ್ಚಿಸಬಹುದಾಗಿರುತ್ತದೆ)**

    **ಆ) ಮಹಿಳೆಯರು: ಎರಡು ಸಂಖ್ಯೆ ಶೌಚಾಲಯ**

    **(ಕನಿಷ್ಠ ಸಂಖ್ಯೆಯಿದ್ದು, ಅವಶ್ಯಕತೆಗೆ ತಕ್ಕಂತೆ ಹೆಚ್ಚಿಸಬಹುದಾಗಿರುತ್ತದೆ)**
4. ಉಪಾಹಾರಗೃಹ: 800 ಚ.ಅ.
5. ಒಂದು ಅಂಗಡಿ ಮಳಿಗೆ: 10' * 12'= 120 ಚ.ಅ.
6. ಬಸ್ ನಿಲುಗಡೆ ಸ್ಥಳ 150'*100 = 15,000 ಚ.ಅ. ಜಾಗವನ್ನು ಅಳವಡಿಸಬೇಕಾಗಿರುತ್ತದೆ.

7. ಬಸ್ ನಿಲ್ದಾಣದ ಸುರಕ್ಷತೆಗಾಗಿ ಸುತ್ತುಗೋಡೆ ಅಥವ ಮುಳ್ಳುಬೇಲಿಯನ್ನು ಅಳವಡಿಸುವುದು.
8. ಹೋಬಳಿ ಮಟ್ಟದ ಬಸ್ ನಿಲ್ದಾಣದಲ್ಲಿ ಬಸ್‌ಗಳ ವೇಳಾಪಟ್ಟಿ, ಜಾಹೀರಾತು ಫಲಕಗಳು, ಬೋರ್‌ವೆಲ್, ಸಂಪ್ ಟ್ಯಾಂಕ್, ಓವರ್‌ಹೆಡ್ ಟ್ಯಾಂಕ್, ಸಾರ್ವಜನಿಕ ಪ್ರಕಟಣಾ ಫಲಕ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.
9. ಮಹಿಳೆಯರಿಗೆ ವಿಶ್ರಾಂತಿ ಗೃಹ ನಿರ್ಮಿಸಬೇಕಾಗಿರುತ್ತದೆ.
10. ಎಲ್ಲಾ ಬಸ್ ನಿಲ್ದಾಣಗಳಲ್ಲಿ ವಿಕಲಾಂಗ ಚೇತನರಿಗಾಗಿ ವಿಶೇಷ ಸೌಲಭ್ಯಗಳಾದ ರ್‍ಯಾಂಪ್, ಹ್ಯಾಂಡ್ ರೈಲಿಂಗ್ಸ್, ಶೌಚಾಲಯಗಳು ಇತ್ಯಾದಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವುದು.
11. ಹೆಚ್ಚಿನ ವಾಣಿಜ್ಯ ಬೇಡಿಕೆಯಿದ್ದಲ್ಲಿ ವಾಣಿಜ್ಯ ಮಳಿಗೆಗಳು/ವಾಣಿಜ್ಯ ಸ್ಥಳದ ನಿರ್ಮಾಣಕ್ಕೆ ಮುನ್ನ Financial Viabilitiy ಮತ್ತು IRR ಗಳನ್ನು ಪರಿಶೀಲಿಸಿ ಕ್ರಮ ಜರುಗಿಸಬೇಕಾಗಿರುತ್ತದೆ ಹಾಗೂ ಸರ್ಕಾರದ ವತಿಯಿಂದ ವಾಣಿಜ್ಯ ಮಳಿಗೆಗಳ ಮೀಸಲಾತಿಯನ್ನು ವಿಕಲಾಂಗ ಚೇತನರಿಗೆ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗಾಗಿ ಪರಿಗಣಿಸುವುದು.
12. ಎಲ್ಲಾ ಬಸ್ ನಿಲ್ದಾಣಗಳಲ್ಲಿ ನೌಕರರ ವಿಶ್ರಾಂತಿ ಗೃಹ ನಿರ್ಮಿಸುವುದು.
13. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸಿಸಿಟಿವಿ ಕ್ಯಾಮೆರಾ/ಸ್ಟೋರೇಜ್ ಸೌಲಭ್ಯವನ್ನು ಒದಗಿಸುವುದು.
14. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಮಹಿಳಾ ಶೌಚಾಲಯಗಳನ್ನು ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಸೂಕ್ತ ಬೆಳಕಿನ ವ್ಯವಸ್ಥೆಯೊಂದಿಗೆ ನಿರ್ಮಿಸುವುದು.
15. **ಎಲ್ಲಾ ಬಸ್ ನಿಲ್ದಾಣದ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು (Rain Water Harvesting) ಮತ್ತು ಮಳೆ ನೀರು ಪುನರ್ ಬಳಕೆ/ಮಳೆ ನೀರು ಸಂಗ್ರಹಣಾ ಘಟಕ ಹೊಂದಿರಬೇಕು.**
16. **ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸೌರಶಕ್ತಿ ಬೆಳಕಿನ ವ್ಯವಸ್ಥೆ ಮತ್ತು ಸೌರಶಕ್ತಿ ಹೀಟರ್‌ಗಳ ವ್ಯವಸ್ಥೆಯನ್ನು ಕಲ್ಪಿಸುವುದು. (Solar lighting System & Solar Water Heater System).**

12. ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ಅಡ್ಡಾದಿಡ್ಡಿ ಚಲಿಸದಂತೆ ಬಸ್ ನಿಲ್ದಾಣವನ್ನು ವಿನ್ಯಾಸಗೊಳಿಸಬೇಕಿರುತ್ತದೆ. ಹಾಗೂ ಕ್ಯಾಟ್‌ಬ್ಯಾಕ್ಸ್ /ಅಂಕಣದಿಂದ ನೇರವಾಗಿ ಬಸ್‌ನ್ನು ಹತ್ತಲು ಅನುವಾಗುವಂತೆ ಕ್ಯಾಟ್‌ಬಾಕ್ಸ್/ಅಂಕಣಗಳನ್ನು ವಿನ್ಯಾಸಗೊಳಿಸಬೇಕು. ಬಸ್‌ಗಳ ಮುಂಭಾಗದಲ್ಲಿ ಬಾಗಿಲನ್ನು ಇಡುವುದು ಪ್ರಯಾಣಿಕರ ಸುರಕ್ಷತಾ ದೃಷ್ಟಿಯಿಂದ ಸೂಕ್ತವಾಗಿದ್ದು, ಚಾಲಕರು ಬಸ್‌ನ್ನು ಮುಂಭಾಗದಲ್ಲಿ ನೇರವಾಗಿ ಕ್ಯಾಟ್‌ಬಾಕ್ಸ್/ಅಂಕಣದ ಕಡೆಗೆ ಚಲಿಸಿ ನಿಲ್ಲಿಸುವಂತಿರಬೇಕು.
13. **ಈ ಕಾಮಗಾರಿ ಅಂದಾಜು ಮೊತ್ತ ಸುಮಾರು 100 ಲಕ್ಷ ರೂ.ಗಳ ಮೊತ್ತದೊಳಗಿರಬೇಕು (2014–15ನೇ ಸಾಲಿನ ಎಸ್.ಆರ್.ದರಗಳಂತೆ ಪರಿಗಣಿಸಲಾಗಿದೆ).**

**ಇ. ತಾಲ್ಲೂಕು ಮಟ್ಟದ ಬಸ್ ನಿಲ್ದಾಣಗಳು:**

1. ಕನಿಷ್ಠ 50 ಬಸ್‌ಗಳ ಆಗಮನ/ನಿರ್ಗಮನ ಇದ್ದಲ್ಲಿ ಮಾತ್ರ ತಾಲ್ಲೂಕು ಮಟ್ಟದಲ್ಲಿ ಬಸ್ ನಿಲ್ದಾಣ ನಿರ್ಮಿಸಬಹುದು.
2. **ತಾಲ್ಲೂಕು ಮಟ್ಟದ ಬಸ್ ನಿಲ್ದಾಣಕ್ಕೆ ಕನಿಷ್ಠ 2 ಎಕರೆ ವಿಸ್ತೀರ್ಣದ ನಿವೇಶನವನ್ನು ಪಡೆಯುವುದು.**
3. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸರ್ಕಾರ/ಮಂಡಲ ಪಂಚಾಯಿತಿ/ತಾಲ್ಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿ ವತಿಯಿಂದ ಉಚಿತವಾಗಿ/ರಿಯಾಯಿತಿ ದರದಲ್ಲಿ ನಿವೇಶನವನ್ನು ಪಡೆದುಕೊಳ್ಳುವುದು.
4. ಬಸ್ ನಿಲ್ದಾಣ ನಿರ್ಮಿಸುವ ನಿವೇಶನವು ಊರಿನ ಮಧ್ಯ ಭಾಗದಲ್ಲಿ ಅಥವಾ ಊರಿನ ಪ್ರಮುಖ ಸ್ಥಳದಲ್ಲಿರಬೇಕಾಗಿರುತ್ತದೆ. ಊರಿನ ಮಧ್ಯ ಭಾಗದಲ್ಲಿ ಖಾಸಗಿ ಬಸ್ ನಿಲ್ದಾಣವಿದ್ದಲ್ಲಿ, ಊರಿನ ಹೊರ ವಲಯದಲ್ಲಿ ಸಾರಿಗೆ ನಿಗಮದ ಬಸ್ ನಿಲ್ದಾಣ ನಿರ್ಮಿಸಬಾರದು.
5. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸುವಾಗ ಪ್ರಧಾನ ವ್ಯವಸ್ಥಾಪಕರು(ಸಂಚಾರ), ಮುಖ್ಯ ಅಭಿಯಂತರು, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಮುಖ್ಯ ಯಾಂತ್ರಿಕ ಅಭಿಯಂತರು(ನಿ), ಸಂಬಂಧಪಟ್ಟ ವಿಭಾಗ ನಿಯಂತ್ರಣಾಧಿಕಾರಿಗಳು ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಭಿಯಂತರನ್ನು ಒಳಗೊಂಡ ಸಮಿತಿಯು ನಿವೇಶನವನ್ನು ನಿರ್ಣಯಿಸಿ, ಮಂಡಳಿಯ ಅನುಮೋದನೆ ಪಡೆದು ನಿವೇಶನವನ್ನು ಪಡೆಯುವುದು.
6. ಬಸ್ ನಿಲ್ದಾಣ/ಘಟಕ ಮುಂತಾದವುಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ನೀಡಿದ ಸಂದರ್ಭದಲ್ಲಿ ತಗ್ಗು ಪ್ರದೇಶ, ಎತ್ತರದ ಪ್ರದೇಶ, ಕೆರೆ ಆವರಣ ಮುಂತಾದ ಸಂದರ್ಭಗಳಲ್ಲಿ ತಗಲುವ ಅಭಿವೃದ್ಧಿ ವೆಚ್ಚಗಳನ್ನು ಹಾಗೂ ಹೆಚ್.ಟಿ. ಲೈನ್ ಸ್ಥಳಾಂತರ, ಕೊಳವೆ ಸಾಲುಗಳ ಸ್ಥಳಾಂತರ, ನಿವೇಶನ ಒತ್ತುವರಿ ಮುಂತಾದವುಗಳನ್ನು ಪರಿಶೀಲಿಸಿ ಪಡೆಯುವುದು.
7. ಬಸ್ ನಿಲ್ದಾಣ ನಿರ್ಮಾಣವನ್ನು ಆರಂಭಿಸುವ ಮುನ್ನವೇ ಸಂಬಂಧಪಟ್ಟ ನಿವೇಶನದ ಖಾತಾ ಇನ್ನಿತರೆ ದಾಖಲೆಗಳು ಸಾರಿಗೆ ನಿಗಮದ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳುವುದು.
8. ನಿರ್ಮಾಣಕ್ಕೆ ಮುನ್ನವೇ ಬಸ್ ನಿಲ್ದಾಣವನ್ನು ನಿರ್ಮಿಸಲು ಬೇಕಾದ ಕಾನೂನುಬದ್ಧ ಅನುಮೋದನೆಗಳನ್ನು ಮತ್ತು ಇನ್ನಿತರೆ ಅವಶ್ಯಕತೆಗಳನ್ನು ಸ್ಥಳೀಯ ಸಂಸ್ಥೆಗಳಿಂದ ಪಡೆದುಕೊಳ್ಳುವುದು.
9. ಬಸ್ ನಿಲ್ದಾಣಗಳಿಗೆ ಸ್ಥಳದ ಹೆಸರನ್ನು ಹೆಸರಿಸಲು ಹಾಗೂ ಯಾವುದೇ ನಾಯಕರ/ಧರ್ಮದ/ವ್ಯಕ್ತಿಯ ಹೆಸರನ್ನು ಇಡದೇ ಇರಲು ಶಿಫಾರಸ್ಸು ಮಾಡಲಾಯಿತು. ಒಂದು ವೇಳೆ ನಾಯಕರ/ಧರ್ಮದ/ವ್ಯಕ್ತಿಯ ಹೆಸರನ್ನು ಇಡಬೇಕಾದ ಸಂದರ್ಭದಲ್ಲಿ, ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಅನುಮೋದನೆ ಪಡೆದು ಈ ಬಗ್ಗೆ ಕ್ರಮ ಜರುಗಿಸುವುದು.
10. ಯಾವುದೇ ಸ್ಥಳದಲ್ಲಿ ಬಸ್ ನಿಲ್ದಾಣವನ್ನು ಈಗಾಗಲೇ ನಿರ್ಮಿಸಿದ್ದು, ಕಾರ್ಯಾಚರಣೆಯಲ್ಲಿದ್ದಲ್ಲಿ ಪರ್ಯಾಯ ಬಸ್ ನಿಲ್ದಾಣವನ್ನು ನಿರ್ಮಿಸುವ ಅವಶ್ಯಕತೆ ಇರುವುದಿಲ್ಲ. ಒಂದು ವೇಳೆ ಬಸ್

ನಿಲ್ದಾಣವನ್ನು ನಿರ್ಮಿಸುವುದು ಅನಿವಾರ್ಯವಾದಲ್ಲಿ ಈ ಕೆಳಗಿನ ಷರತ್ತಿನಂತೆ ಸ್ಥಳಾಂತರಿಸಬಹುದಾಗಿರುತ್ತದೆ:

- ಖಾಸಗಿ ಬಸ್ ನಿಲ್ದಾಣ ನಗರದ ಮಧ್ಯ ಭಾಗದಲ್ಲಿ ಇದ್ದು, ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಹೊರ ಭಾಗದಲ್ಲಿ ಪ್ರಸ್ತಾಪಿಸಿದರೆ ಈ ರೀತಿಯ ಪ್ರಸ್ತಾವನೆಗಳು ಸಂಸ್ಥೆಯ ಹಿತದೃಷ್ಟಿಯಿಂದ ತಿರಸ್ಕರಿಸುವುದು.
- ಬಸ್ ನಿಲ್ದಾಣದ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಸಾಧಕ-ಭಾಧಕಗಳನ್ನು ಪರಿಶೀಲಿಸಿ Financial Viabilitiy ಬಗ್ಗೆ ಪರಿಶೀಲಿಸಿ ಮಂಡಳಿಯ ಅನುಮೋದನೆ ಹಾಗೂ ಸರ್ಕಾರದ ಅನುಮೋದನೆ ಪಡೆದು ಕ್ರಮ ಜರುಗಿಸುವುದು.

**11. ತಾಲ್ಲೂಕು ಮಟ್ಟದ ಬಸ್ ನಿಲ್ದಾಣಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ:**

1. ಪ್ರಯಾಣಿಕರ ಕಾಯುವಿಕೆ ಹಜಾರ: 1000 ಚ.ಅ. (20ಅಡಿ X 50 ಅಡಿ)
2. ಸಂಚಾರ ನಿಯಂತ್ರಕರ ಕೊಠಡಿ: 12 ಅಡಿ X 20 ಅಡಿ= 240 ಚ.ಅ.
3. **ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ**

   **ಅ) ಪುರುಷರು: ಎಂಟು ಸಂಖ್ಯೆ ಶೌಚಾಲಯ**

   **ಹತ್ತು ಸಂಖ್ಯೆಯ ಮೂತ್ರಾಲಯ**

   **(ಕನಿಷ್ಠ ಸಂಖ್ಯೆಯಿದ್ದು, ಅವಶ್ಯಕತೆಗೆ ತಕ್ಕಂತೆ ಹೆಚ್ಚಿಸಬಹುದಾಗಿರುತ್ತದೆ)**

   **ಆ) ಮಹಿಳೆಯರು: ಎಂಟು ಸಂಖ್ಯೆ ಶೌಚಾಲಯ**

   **(ಕನಿಷ್ಠ ಸಂಖ್ಯೆಯಿದ್ದು, ಅವಶ್ಯಕತೆಗೆ ತಕ್ಕಂತೆ ಹೆಚ್ಚಿಸಬಹುದಾಗಿರುತ್ತದೆ)**
4. ಉಪಾಹಾರಗೃಹ: 1500 ಚ.ಅ.
5. ಕನಿಷ್ಠ ಮೂರು ಅಂಗಡಿ ಮಳಿಗೆಗಳು:10 ಅಡಿ X 12 ಅಡಿ =120 ಚ.ಅ.
6. ಬಸ್ ನಿಲುಗಡೆ ಸ್ಥಳ: 250 ಅಡಿ X 100 ಅಡಿ =25,000 ಚ.ಅ. ಜಾಗವನ್ನು ಅಳವಡಿಸಬೇಕಾರಿತ್ತದೆ.
7. ಬಸ್ ನಿಲ್ದಾಣದ ಸುರಕ್ಷತೆಗಾಗಿ ಸುತ್ತುಗೋಡೆ ಅಳವಡಿಸುವುದು.
8. ತಾಲ್ಲೂಕು ಮಟ್ಟದ ಬಸ್ ನಿಲ್ದಾಣದಲ್ಲಿ ಬಸ್‌ಗಳ ವೇಳಾಪಟ್ಟಿ, ಜಾಹೀರಾತು ಫಲಕಗಳು, ಬೋರ್‌ವೆಲ್, ಸಂಪ್ ಟ್ಯಾಂಕ್, ಓವರ್‌ಹೆಡ್ ಟ್ಯಾಂಕ್, ಸಾರ್ವಜನಿಕ ಪ್ರಕಟಣಾ ಫಲಕ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.
9. ಮಹಿಳೆಯರಿಗೆ ವಿಶ್ರಾಂತಿ ಗೃಹ ನಿರ್ಮಿಸುವುದು.
10. ನೌಕರರಿಗೆ ವಿಶ್ರಾಂತಿ ಗೃಹ ನಿರ್ಮಿಸುವುದು.

11. ಎಲ್ಲಾ ಬಸ್ ನಿಲ್ದಾಣಗಳಲ್ಲಿ ವಿಕಲಾಂಗ ಚೇತನರಿಗಾಗಿ ವಿಶೇಷ ಸೌಲಭ್ಯಗಳಾದ ರ್‍ಯಾಂಪ್, ಹ್ಯಾಂಡ್ ರೈಲಿಂಗ್ಸ್, ಶೌಚಾಲಯಗಳು ಇತ್ಯಾದಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವುದು.

12. ಹೆಚ್ಚಿನ ವಾಣಿಜ್ಯ ಬೇಡಿಕೆಯಿದ್ದಲ್ಲಿ ವಾಣಿಜ್ಯ ಮಳಿಗೆಗಳು/ವಾಣಿಜ್ಯ ಸ್ಥಳದ ನಿರ್ಮಾಣಕ್ಕೆ ಮುನ್ನ Financial Viabilitiy ಮತ್ತು IRR ಗಳನ್ನು ಪರಿಶೀಲಿಸಿ ಕ್ರಮ ಜರುಗಿಸುವುದು ಹಾಗೂ ಸರ್ಕಾರದ ವತಿಯಿಂದ ವಾಣಿಜ್ಯ ಮಳಿಗೆಗಳ ಮೀಸಲಾತಿಯನ್ನು ವಿಕಲಾಂಗ ಚೇತನರಿಗೆ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗಾಗಿ ಪರಿಗಣಿಸುವುದು.

13. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸಿಸಿಟಿವಿ ಕ್ಯಾಮೆರಾ/ಸ್ಟೋರೇಜ್ ಸೌಲಭ್ಯವನ್ನು ಒದಗಿಸುವುದು.

14. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಮಹಿಳಾ ಶೌಚಾಲಯಗಳನ್ನು ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಸೂಕ್ತ ಬೆಳಕಿನ ವ್ಯವಸ್ಥೆಯೊಂದಿಗೆ ನಿರ್ಮಿಸುವುದು.

15. **ಎಲ್ಲಾ ಬಸ್ ನಿಲ್ದಾಣದ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು (Rain Water Harvesting) ಮತ್ತು ಮಳೆ ನೀರು ಪುನರ್ ಬಳಕೆ/ಮಳೆ ನೀರು ಸಂಗ್ರಹಣಾ ಘಟಕ ಹೊಂದಿರಬೇಕು.**

16. **ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸೌರಶಕ್ತಿ ಬೆಳಕಿನ ವ್ಯವಸ್ಥೆ ಮತ್ತು ಸೌರಶಕ್ತಿ ಹೀಟರ್‌ಗಳ ವ್ಯವಸ್ಥೆಯನ್ನು ಕಲ್ಪಿಸುವುದು. (Solar lighting System & Solar Water Heater System).**

12. ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ಅಡ್ಡಾದಿಡ್ಡಿ ಚಲಿಸದಂತೆ ಬಸ್ ನಿಲ್ದಾಣವನ್ನು ವಿನ್ಯಾಸಗೊಳಿಸುವುದು ಹಾಗೂ ಕ್ಯಾಟ್‌ಬ್ಯಾಕ್ಸ್ /ಅಂಕಣದಿಂದ ನೇರವಾಗಿ ಬಸ್‌ನ್ನು ಹತ್ತಲು ಅನುವಾಗುವಂತೆ ಕ್ಯಾಟ್‌ಬಾಕ್ಸ್/ಅಂಕಣಗಳನ್ನು ವಿನ್ಯಾಸಗೊಳಿಸಬೇಕು. ಬಸ್‌ಗಳ ಮುಂಭಾಗದಲ್ಲಿ ಬಾಗಿಲನ್ನು ಇಡುವುದು ಪ್ರಯಾಣಿಕರ ಸುರಕ್ಷತಾ ದೃಷ್ಟಿಯಿಂದ ಸೂಕ್ತವಾಗಿದ್ದು, ಚಾಲಕರು ಬಸ್‌ನ್ನು ಮುಂಭಾಗದಲ್ಲಿ ನೇರವಾಗಿ ಕ್ಯಾಟ್‌ಬಾಕ್ಸ್/ಅಂಕಣದ ಕಡೆಗೆ ಚಲಿಸಿ ನಿಲ್ಲಿಸುವಂತಿರಬೇಕು.

13. **ಈ ಕಾಮಗಾರಿ ಅಂದಾಜು ಮೊತ್ತ ಸುಮಾರು 250.00 ಲಕ್ಷ ರೂ.ಗಳಾಗುತ್ತವೆ (2014–15ನೇ ಸಾಲಿನ ಎಸ್.ಆರ್.ದರಗಳಂತೆ ಪರಿಗಣಿಸಲಾಗಿದೆ).**

**ಈ. ಜಿಲ್ಲಾ ಮಟ್ಟದ ಬಸ್ ನಿಲ್ದಾಣಗಳು:**

1. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು.
2. **ಜಿಲ್ಲಾ ಮಟ್ಟದ ಬಸ್ ನಿಲ್ದಾಣಕ್ಕೆ ಕನಿಷ್ಠ 4 ಎಕರೆ ವಿಸ್ತೀರ್ಣದ ನಿವೇಶನವನ್ನು ಪಡೆಯುವುದು.**
3. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸರ್ಕಾರ/ಜಿಲ್ಲಾಡಳಿತದ ವತಿಯಿಂದ ಉಚಿತವಾಗಿ/ರಿಯಾಯಿತಿ ದರದಲ್ಲಿ ನಿವೇಶನವನ್ನು ಪಡೆದುಕೊಳ್ಳುವುದು.

4. ಬಸ್ ನಿಲ್ದಾಣ ನಿರ್ಮಿಸುವ ನಿವೇಶನವು ಊರಿನ ಮಧ್ಯ ಭಾಗದಲ್ಲಿ ಅಥವಾ ಊರಿನ ಪ್ರಮುಖ ಸ್ಥಳದಲ್ಲಿರಬೇಕಾಗಿರುತ್ತದೆ. ಊರಿನ ಮಧ್ಯೆಭಾಗದಲ್ಲಿ ಖಾಸಗಿ ಬಸ್ ನಿಲ್ದಾಣವಿದ್ದಲ್ಲಿ, ಊರಿನ ಹೊರ ವಲಯದಲ್ಲಿ ಸಾರಿಗೆ ನಿಗಮದ ಬಸ್ ನಿಲ್ದಾಣ ನಿರ್ಮಿಸಬಾರದು.
5. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸುವಾಗ ಪ್ರಧಾನ ವ್ಯವಸ್ಥಾಪಕರು(ಸಂಚಾರ), ಮುಖ್ಯ ಅಭಿಯಂತರು, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಮುಖ್ಯ ಯಾಂತ್ರಿಕ ಅಭಿಯಂತರು(ನಿ), ಸಂಬಂಧಪಟ್ಟ ವಿಭಾಗ ನಿಯಂತ್ರಣಾಧಿಕಾರಿಗಳು ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಭಿಯಂತರರನ್ನು ಒಳಗೊಂಡ ಸಮಿತಿಯು ನಿವೇಶನವನ್ನು ನಿರ್ಣಯಿಸಿ, ಸೂಕ್ತಾಧಿಕಾರಿಗಳು/ಮಂಡಳಿ ನಿರ್ದೇಶಕರ ಅನುಮೋದನೆಗಾಗಿ ಮಂಡಿಸುವುದು.
6. ಬಸ್ ನಿಲ್ದಾಣ/ಘಟಕ ಮುಂತಾದವುಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ನೀಡಿದ ಸಂದರ್ಭದಲ್ಲಿ ತಗ್ಗು ಪ್ರದೇಶ, ಎತ್ತರದ ಪ್ರದೇಶ, ಕೆರೆ ಆವರಣ ಮುಂತಾದ ಸಂದರ್ಭಗಳಲ್ಲಿ ತಗಲುವ ಅಭಿವೃದ್ಧಿ ವೆಚ್ಚಗಳನ್ನು ಹಾಗೂ ಹೆಚ್.ಟಿ. ಲೈನ್ ಸ್ಥಳಾಂತರ, ಕೊಳವೆ ಸಾಲುಗಳ ಸ್ಥಳಾಂತರ, ನಿವೇಶನ ಒತ್ತುವರಿ ಮುಂತಾದವುಗಳನ್ನುಪರಿಶೀಲಿಸಿ ಪಡೆಯುವುದು.
7. ಬಸ್ ನಿಲ್ದಾಣ ನಿರ್ಮಾಣವನ್ನು ಆರಂಭಿಸುವ ಮುನ್ನವೇ ಸಂಬಂಧಪಟ್ಟ ನಿವೇಶನದ ಖಾತಾ ಇನ್ನಿತರೆ ದಾಖಲೆಗಳು ಸಾರಿಗೆ ನಿಗಮದ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳುವುದು.
8. ನಿರ್ಮಾಣಕ್ಕೆ ಮುನ್ನವೇ ಬಸ್ ನಿಲ್ದಾಣವನ್ನು ನಿರ್ಮಿಸಲು ಬೇಕಾದ ಕಾನೂನುಬದ್ಧ ಅನುಮೋದನೆಗಳನ್ನು ಮತ್ತು ಇನ್ನಿತರೆ ಅವಶ್ಯಕತೆಗಳನ್ನು ಸ್ಥಳೀಯ ಸಂಸ್ಥೆಗಳು ಒದಗಿಸುವುದು.
9. ಬಸ್ ನಿಲ್ದಾಣಗಳಿಗೆ ಸ್ಥಳದ ಹೆಸರನ್ನು ಹೆಸರಿಸಲು ಹಾಗೂ ಯಾವುದೇ ನಾಯಕರ/ಧರ್ಮದ/ವ್ಯಕ್ತಿಯ ಹೆಸರನ್ನು ಇಡಬಾರದು. ಒಂದು ವೇಳೆ ನಾಯಕರ/ಧರ್ಮದ/ವ್ಯಕ್ತಿಯ ಹೆಸರನ್ನು ಇಡಬೇಕಾದ ಸಂದರ್ಭದಲ್ಲಿ, ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಅನುಮೋದನೆ ಪಡೆದು ಈ ಬಗ್ಗೆ ಕ್ರಮ ಜರುಗಿಸುವುದು.
10. ಯಾವುದೇ ಸ್ಥಳದಲ್ಲಿ ಬಸ್ ನಿಲ್ದಾಣವನ್ನು ಈಗಾಗಲೇ ನಿರ್ಮಿಸಿದ್ದು, ಕಾರ್ಯಾಚರಣೆಯಲ್ಲಿದ್ದಲ್ಲಿ ಪರ್ಯಾಯ ಬಸ್ ನಿಲ್ದಾಣವನ್ನು ನಿರ್ಮಿಸುವ ಅವಶ್ಯಕತೆ ಇರುವುದಿಲ್ಲ. ಒಂದು ವೇಳೆ ಬಸ್ ನಿಲ್ದಾಣವನ್ನು ನಿರ್ಮಿಸುವುದು ಅನಿವಾರ್ಯವಾದಲ್ಲಿ ಈ ಕೆಳಗಿನ ಷರತ್ತಿನಂತೆ ಸ್ಥಳಾಂತರಿಸಬಹುದಾಗಿರುತ್ತದೆ:
    - ಖಾಸಗಿ ಬಸ್ ನಿಲ್ದಾಣ ನಗರದ ಮಧ್ಯ ಭಾಗದಲ್ಲಿ ಇದ್ದು, ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಹೊರ ಭಾಗದಲ್ಲಿ ಪ್ರಸ್ತಾಪಿಸಿದರೆ ಈ ರೀತಿಯ ಪ್ರಸ್ತಾವನೆಗಳು ಸಂಸ್ಥೆಯ ಹಿತದೃಷ್ಟಿಯಿಂದ ತಿರಸ್ಕರಿಸುವುದು.

- ಬಸ್ ನಿಲ್ದಾಣದ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಸಾಧಕ-ಭಾಧಕಗಳನ್ನು ಪರಿಶೀಲಿಸಿ Financial Viabilitiy ಬಗ್ಗೆ ಪರಿಶೀಲಿಸಿ ಮಂಡಳಿಯ ಅನುಮೋದನೆ ಹಾಗೂ ಸರ್ಕಾರದ ಅನುಮೋದನೆ ಪಡೆದು ಕ್ರಮ ಜರುಗಿಸುವುದು.

11. **ಜಿಲ್ಲಾ ಮಟ್ಟದ ಬಸ್ ನಿಲ್ದಾಣಗಳಲ್ಲಿ ಈ ಕೆಳಕಂಡ ಕನಿಷ್ಠ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.**

1. ಪ್ರಯಾಣಿಕರ ಕಾಯುವಿಕೆ ಹಜಾರ: 3400 ಚ.ಅ.(60ಅಡಿ X40ಅಡಿ)

   = 2400 ಚ.ಅ.:ಸಿ.ಎ.

   1000 ಚ.ಅ.:ಕಟ್ಟಡ
2. ಸಂಚಾರ ನಿಯಂತ್ರಕರ ಕೊಠಡಿ: 12 ಅಡಿ X 20 ಅಡಿ= 240 ಚ.ಅ.
3. ಟಿಕೇಟ್ ಬುಕ್ಕಿಂಗ್ ಕೌಂಟರ್ ಗಳು, ಪೊಲೀಸ್ ಚೌಕಿ, ಅಂಚೆ ಕಛೇರಿ,ಡಾರ್ಮಿಟರಿ, ಕ್ಲೋಕ್ ರೂಂ ಮುಂತಾದ ಸೌಲಭ್ಯಗಳು ಲಭ್ಯವಿರಬೇಕಾಗಿರುತ್ತದೆ.
4. **ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ**

   **ಅ) ಪುರುಷರು : ಹತ್ತು ಸಂಖ್ಯೆ ಶೌಚಾಲಯ**
   **ಹತ್ತು ಸಂಖ್ಯೆಯ ಮೂತ್ರಾಲಯ**
   **(ಕನಿಷ್ಠ ಸಂಖ್ಯೆಯಿದ್ದು, ಅವಶ್ಯಕತೆಗೆ ತಕ್ಕಂತೆ ಹೆಚ್ಚಿಸಬಹುದಾಗಿರುತ್ತದೆ)**

   **ಆ) ಮಹಿಳೆಯರು: ಹತ್ತು ಸಂಖ್ಯೆ ಶೌಚಾಲಯ**
   **(ಕನಿಷ್ಠ ಸಂಖ್ಯೆಯಿದ್ದು, ಅವಶ್ಯಕತೆಗೆ ತಕ್ಕಂತೆ ಹೆಚ್ಚಿಸಬಹುದಾಗಿರುತ್ತದೆ)**
5. ಉಪಾಹಾರಗೃಹ: 2000 ಚ.ಅ.
6. ಕನಿಷ್ಠ ಐದು ಅಂಗಡಿ ಮಳಿಗೆಗಳು
7. ಬಸ್ ನಿಲುಗಡೆ ಸ್ಥಳ 200ಅಡಿ X 100ಅಡಿ =20,000 ಚ.ಅ. ಜಾಗವನ್ನು ಅಳವಡಿಸುವುದು.
8. ಬಸ್ ನಿಲ್ದಾಣದ ಸುರಕ್ಷತೆಗಾಗಿ ಸುತ್ತುಗೋಡೆ ನಿರ್ಮಿಸುವುದು.
9. ಮಹಿಳಾ ವಿಶ್ರಾಂತಿ ಕೊಠಡಿ ನಿರ್ಮಿಸುವುದು.
10. ನೌಕರರ ವಿಶ್ರಾಂತಿ ಗೃಹ ನಿರ್ಮಿಸುವುದು.
11. ಜಿಲ್ಲಾ ಮಟ್ಟದ ಬಸ್ ನಿಲ್ದಾಣದಲ್ಲಿ ಬಸ್‌ಗಳ ವೇಳಾಪಟ್ಟಿ, ಜಾಹೀರಾತು ಫಲಕಗಳು, ಬೋರ್‌ವೆಲ್, ಸಂಪ್ ಟ್ಯಾಂಕ್, ಓವರ್‌ಹೆಡ್ ಟ್ಯಾಂಕ್, ಸಾರ್ವಜನಿಕ ಪ್ರಕಟಣಾ ಫಲಕ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು.
12. ಎಲ್ಲಾ ಬಸ್ ನಿಲ್ದಾಣಗಳಲ್ಲಿ ವಿಕಲಾಂಗ ಚೇತನರಿಗಾಗಿ ವಿಶೇಷ ಸೌಲಭ್ಯಗಳಾದ ರ್‍ಯಾಂಪ್, ಹ್ಯಾಂಡ್ ರೈಲಿಂಗ್ಸ್, ಶೌಚಾಲಯಗಳು ಇತ್ಯಾದಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವುದು.
13. ಹೆಚ್ಚಿನ ವಾಣಿಜ್ಯ ಬೇಡಿಕೆಯಿದ್ದಲ್ಲಿ ವಾಣಿಜ್ಯ ಮಳಿಗೆಗಳು/ವಾಣಿಜ್ಯ ಸ್ಥಳದ ನಿರ್ಮಾಣಕ್ಕೆ ಮುನ್ನ Financial Viabilitiy ಮತ್ತು IRR ಗಳನ್ನು ಪರಿಶೀಲಿಸಿ ಕ್ರಮ ಜರುಗಿಸಬೇಕಾಗಿರುತ್ತದೆ. ಹಾಗೂ ಸರ್ಕಾರದ ವತಿಯಿಂದ ವಾಣಿಜ್ಯ ಮಳಿಗೆಗಳ ಮೀಸಲಾತಿಯನ್ನು ವಿಕಲಾಂಗ ಚೇತನರಿಗೆ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗಾಗಿ ಪರಿಗಣಿಸುವುದು.

14. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸಿಸಿಟಿವಿ ಕ್ಯಾಮೆರಾ/ಸ್ಟೋರೇಜ್ ಸೌಲಭ್ಯವನ್ನು ಒದಗಿಸುವುದು.
15. ಎಲ್ಲಾ ಬಸ್ ನಿಲ್ದಾಣದ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು **(Rain Water Harvesting)** ಮತ್ತು ಮಳೆ ನೀರು ಪುನರ್ ಬಳಕೆ/ಮಳೆ ನೀರು ಸಂಗ್ರಹಣಾ ಘಟಕ ಹೊಂದಿರಬೇಕು.
16. ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸೌರಶಕ್ತಿ ಬೆಳಕಿನ ವ್ಯವಸ್ಥೆ ಮತ್ತು ಸೌರಶಕ್ತಿ ಹೀಟರ್‌ಗಳ ವ್ಯವಸ್ಥೆಯನ್ನು ಕಲ್ಪಿಸುವುದು. **(Solar lighting System & Solar Water Heater System).**

12. ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ಅಡ್ಡಾದಿಡ್ಡಿ ಚಲಿಸದಂತೆ ಬಸ್ ನಿಲ್ದಾಣವನ್ನು ವಿನ್ಯಾಸಗೊಳಿಸುವುದು ಹಾಗೂ ಕ್ಯಾಟ್‌ಬ್ಯಾಕ್ಸ್ /ಅಂಕಣದಿಂದ ನೇರವಾಗಿ ಬಸ್‌ನ್ನು ಹತ್ತಲು ಅನುವಾಗುವಂತೆ ಕ್ಯಾಟ್‌ಬಾಕ್ಸ್/ಅಂಕಣಗಳನ್ನು ವಿನ್ಯಾಸಗೊಳಿಸಬೇಕು. ಬಸ್‌ಗಳ ಮುಂಭಾಗದಲ್ಲಿ ಬಾಗಿಲನ್ನು ಇಡುವುದು ಪ್ರಯಾಣಿಕರ ಸುರಕ್ಷತಾ ದೃಷ್ಟಿಯಿಂದ ಸೂಕ್ತವಾಗಿದ್ದು, ಚಾಲಕರು ಬಸ್‌ನ್ನು ಮುಂಭಾಗದಲ್ಲಿ ನೇರವಾಗಿ ಕ್ಯಾಟ್‌ಬಾಕ್ಸ್/ಅಂಕಣದ ಕಡೆಗೆ ಚಲಿಸಿ ನಿಲ್ಲಿಸುವಂತಿರಬೇಕು.
13. **ಈ ಕಾಮಗಾರಿ ಅಂದಾಜು ಮೊತ್ತ ಸುಮಾರು 500.00 ಲಕ್ಷ ರೂ.ಗಳಿರಬೇಕು (2014–15ನೇ ಸಾಲಿನ** ಎಸ್.ಆರ್.ದರಗಳಂತೆ ಪರಿಗಣಿಸಲಾಗಿದೆ).

**ಉ. ಹೋಬಳಿ ಮಟ್ಟದ ಬಸ್ ಘಟಕಗಳು:**

ಹೋಬಳಿ ಮಟ್ಟದಲ್ಲಿ ಬಸ್ ಘಟಕಗಳನ್ನು ನಿರ್ಮಿಸಬಾರದು.

**ಊ. ತಾಲ್ಲೂಕು ಮಟ್ಟದ ಬಸ್ ಘಟಕಗಳು:**

1. ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಹಂತ ಹಂತವಾಗಿ ಬಸ್ ಘಟಕಗಳನ್ನು ನಿರ್ಮಿಸುವುದು.
2. ಬಸ್ ಘಟಕಗಳನ್ನು ಕನಿಷ್ಠ 75 ಅನುಸೂಚಿಗಳಿದ್ದಲ್ಲಿ ಮಾತ್ರ ನಿರ್ಮಿಸುವುದು. ಆದಾಗ್ಯೂ ಒಂದು ವೇಳೆ ಹತ್ತಿರದ ಘಟಕ ಅಂದರೆ 40 ರಿಂದ 50 ಕಿ.ಮೀ ಅಂತರದಲ್ಲಿದ್ದು, ಆ ಘಟಕವು 125 ರಿಂದ 150 ಅನುಸೂಚಿಗಳನ್ನು ಹೊಂದಿದಲ್ಲಿ, ಅಂತಹ ತಾಲ್ಲೂಕು ಕೇಂದ್ರಗಳಲ್ಲಿ ಬಸ್ ಘಟಕ ಪ್ರಾರಂಭಿಸಲು ಕನಿಷ್ಠ 50 ಅನುಸೂಚಿಗಳನ್ನು ಹೊಂದಿರಬೇಕು.
3. **ತಾಲ್ಲೂಕು ಮಟ್ಟದ ಬಸ್ ಘಟಕಕ್ಕೆ ಕನಿಷ್ಠ ಮೂರು ಎಕರೆ ವಿಸ್ತೀರ್ಣದ ನಿವೇಶನವನ್ನು ಪಡೆಯುವುದು.**

78

4. ತಾಲ್ಲೂಕು ಮಟ್ಟದ ಬಸ್ ಘಟಕ ನಿರ್ಮಾಣಕ್ಕಾಗಿ ಉಚಿತವಾಗಿ/ರಿಯಾಯಿತಿ ದರದಲ್ಲಿ ನಿವೇಶನವನ್ನು ಪಡೆದುಕೊಳ್ಳುವುದು.
5. ಸ್ಥಳೀಯ ಸಂಸ್ಥೆಗಳಿಂದ ಬಸ್ ಘಟಕ ನಿರ್ಮಿಸಲು ನಿವೇಶನವನ್ನು ಸಮತಟ್ಟು ಮಾಡಿ ಕರಾರಸಾ ನಿಗಮಕ್ಕೆ ಪಡೆದುಕೊಳ್ಳುವುದು. ಬಸ್ ನಿಲ್ದಾಣ/ಘಟಕ ಮುಂತಾದವುಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ಪಡೆದ/ನೀಡಿದ ಸಂದರ್ಭದಲ್ಲಿ ತಗ್ಗು ಪ್ರದೇಶ, ಎತ್ತರದ ಪ್ರದೇಶ, ಕೆರೆ ಆವರಣ ಮುಂತಾದ ಸಂದರ್ಭಗಳಲ್ಲಿ ತಗಲುವ ಅಭಿವೃದ್ಧಿ ವೆಚ್ಚಗಳನ್ನು ಹಾಗೂ ಹೆಚ್.ಟಿ. ಲೈನ್ ಸ್ಥಳಾಂತರ, ಕೊಳವೆ ಸಾಲುಗಳ ಸ್ಥಳಾಂತರ, ನಿವೇಶನ ಒತ್ತುವರಿ ಮುಂತಾದವುಗಳನ್ನು ಪರಿಶೀಲಿಸಿ ಪಡೆಯುವುದು.
6. ಬಸ್ ಘಟಕ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸುವಾಗ ಪ್ರಧಾನ ವ್ಯವಸ್ಥಾಪಕರು(ಸಂಚಾರ), ಮುಖ್ಯ ಅಭಿಯಂತರು, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಮುಖ್ಯ ಯಾಂತ್ರಿಕ ಅಭಿಯಂತರು(ನಿ), ಸಂಬಂಧಪಟ್ಟ ವಿಭಾಗ ನಿಯಂತ್ರಣಾಧಿಕಾರಿಗಳು ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಭಿಯಂತರನ್ನು ಒಳಗೊಂಡ ಸಮಿತಿಯು ನಿವೇಶನವನ್ನು ನಿರ್ಣಯಿಸಿ, ಸೂಕ್ತಾಧಿಕಾರಿಗಳು/ಮಂಡಳಿ ನಿರ್ದೇಶಕರ ಅನುಮೋದನೆಗಾಗಿ ಮಂಡಿಸುವುದು.
7. ಬಸ್ ಘಟಕ ನಿರ್ಮಾಣವನ್ನು ಆರಂಭಿಸುವ ಮುನ್ನ ಸಂಬಂಧಪಟ್ಟ ನಿವೇಶನದ ಖಾತಾ ಇನ್ನಿತರೆ ದಾಖಲೆಗಳು ಸಾರಿಗೆ ನಿಗಮದ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳುವುದು.
8. ಬಸ್ ಘಟಕ ನಿರ್ಮಿಸಲು ಬೇಕಾದ ಅನುಮೋದನೆಗಳನ್ನು ಮತ್ತು ಇನ್ನಿತರೆ ಅವಶ್ಯಕತೆಗಳನ್ನು ಸ್ಥಳೀಯ ಸಂಸ್ಥೆಗಳಿಂದ ಪಡೆದುಕೊಳ್ಳುವುದು.
9. ತಾಲ್ಲೂಕು ಮಟ್ಟದ ಬಸ್ ಘಟಕಗಳಲ್ಲಿ ಈ ಕೆಳಕಂಡ ಕನಿಷ್ಠ ಸೌಲಭ್ಯಗಳನ್ನು ಒದಗಿಸುವುದು.
    1. ಬಸ್ ಘಟಕಗಳನ್ನು ಕನಿಷ್ಠ 75 ಅನುಸೂಚಿಗಳು ಇದ್ದಲ್ಲಿ ಮಾತ್ರ ನಿರ್ಮಿಸುವುದು. ಆದಾಗ್ಯೂ ಒಂದು ವೇಳೆ ಹತ್ತಿರದ ಘಟಕ ಅಂದರೆ 40 ರಿಂದ 50 ಕಿ.ಮೀ ಅಂತರದಲ್ಲಿದ್ದು, ಆ ಘಟಕವು 125 ರಿಂದ 150 ಅನುಸೂಚಿಗಳನ್ನು ಹೊಂದಿದಲ್ಲಿ, ಅಂತಹ ತಾಲ್ಲೂಕು ಕೇಂದ್ರಗಳಲ್ಲಿ ಬಸ್ ಘಟಕ ಪ್ರಾರಂಭಿಸಲು ಕನಿಷ್ಠ 50 ಅನುಸೂಚಿಗಳನ್ನು ಹೊಂದಿರಬೇಕು.
    2. 100 ಅನುಸೂಚಿಗಳಿಗಿಂತ ಜಾಸ್ತಿ ಆದಲ್ಲಿ ಹೊಸ ಘಟಕ ನಿರ್ಮಿಸುವುದು.
    3. ಬಸ್ ಘಟಕದ ನಿವೇಶನವು ಬಸ್ ನಿಲ್ದಾಣದಿಂದ 2 ರಿಂದ 3 ಕಿ.ಮೀ ಅಂತರದಲ್ಲಿ ಲಭ್ಯವಿರಬೇಕು
    4. ಘಟಕ ವ್ಯವಸ್ಥಾಪಕರು ಕಛೇರಿಯು ಶೌಚಾಲಯವನ್ನೊಳಗೊಂಡಂತೆ ಕನಿಷ್ಠ 12ಅಡಿ X 15 ಅಡಿ ವಿಸ್ತೀರ್ಣ ಇರಬೇಕಾಗಿರುತ್ತದೆ ಹಾಗೂ ಬಸ್ ರಿಪೇರಿ ಅಂಕಣವು ಘಟಕ ವ್ಯವಸ್ಥಾಪಕರಿಗೆ ಕಾಣುವಂತಿರಬೇಕು.
    5. ಕನಿಷ್ಠ 2 ಪರಿವೀಕ್ಷಣಾ ಗುಂಡಿಗಳಿರಬೇಕು (75 ಅಡಿ ಅಗಲದ ಅಂತರದಲ್ಲಿ ಒಮ್ಮೆಗೆ 4 ಬಸ್ ಗಳ ರಿಪೇರಿಗಾಗಿ)
    6. ಕನಿಷ್ಠ 4 ಬಸ್‌ಗಳಿಗಾಗಿ ಬಸ್ ಡಾಕಿಂಗ್ ಬೇಗಳು ಒಳಗೊಂಡಿರಬೇಕು

7. ನಗದು ಶಾಖೆ & ಇಕ್ವಿಪ್‌ಮೆಂಟ್ ಶಾಖೆಯನ್ನು ಹೊಂದಿರಬೇಕು–20ಅಡಿ X 24 ಅಡಿ

8. ಟೈರ್ ಕೊಠಡಿಯನ್ನು ಹೊಂದಿರಬೇಕು–10 ಅಡಿ X 12 ಅಡಿ

9. ವೆಲ್ಡಿಂಗ್ ಕೊಠಡಿಯನ್ನು ಹೊಂದಿರಬೇಕು–10 ಅಡಿ X 12 ಅಡಿ

10. ಬ್ಯಾಟರಿ ಕೊಠಡಿಯನ್ನು ಹೊಂದಿರಬೇಕು – 10 ಅಡಿ X 12 ಅಡಿ

11. ಶಿಫ್ಟ್ ಕೊಠಡಿಯನ್ನು ಹೊಂದಿರಬೇಕು– 10 ಅಡಿ X 12 ಅಡಿ

12. ವಾಚ್ & ವಾರ್ಡ್/ಭದ್ರತಾ ಕೊಠಡಿ ಹೊಂದಿರಬೇಕು– 10 ಅಡಿ X 12 ಅಡಿ

13. ಸಂಪ್/ಟ್ಯಾಂಕ್ ಹೊಂದಿರಬೇಕು– 25,000 ಲೀಟರ್ ಸಾಮರ್ಥ್ಯ

14. ಡೀಸೆಲ್/ಫ್ಯುಯಲ್ ಕೊಠಡಿ ಹೊಂದಿರಬೇಕು– 10 ಅಡಿ X 10 ಅಡಿ

15. ಕಾರ್ ವಾಶಿಂಗ್ ಕೊಠಡಿಯೊಂದಿಗೆ ವಾಶಿಂಗ್ ಪ್ಲಾಟ್‌ಫಾರಂ– 10 ಅಡಿ X 10 ಅಡಿ

16. ಎಲ್ಲಾ ಬಸ್ ಘಟಕ/ವಿಭಾಗೀಯ ಕಾರ್ಯಾಗಾರ ಮತ್ತು ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಸ್ಥಾವರವನ್ನು (**Effluent Treatment Plant**) ಸ್ಥಾಪಿಸುವುದು. ಈ ಸ್ಥಾವರದಿಂದ ಹೊರಬರುವ ನೀರಿನ ಗುಣಮಟ್ಟವು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗೆ ಒಳಪಟ್ಟಿರಬೇಕು.

17. ಮಹಿಳೆಯರಿಗೆ ಮತ್ತು ಪುರುಷರಿಗಾಗಿ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇರಬೇಕು

18. ಎಲ್ಲಾ ಬಸ್ ಘಟಕಗಳ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು (**Rain Water Harvesting**) ಮತ್ತು ಮಳೆ ನೀರು ಪುನರ್ ಬಳಕೆ/ಮಳೆ ನೀರು ಸಂಗ್ರಹಣಾ ಘಟಕ ಹೊಂದಿರಬೇಕು.

19. ಕೊಳವೆ ಬಾವಿ ನೀರು/ ಪುರಸಭಾ ನೀರಿನ ಗಡುಸತ್ವ 50 ಪಿಪಿಎಂಗಿಂತ ಹೆಚ್ಚು ಇದ್ದಲ್ಲಿ ಅವಶ್ಯಕತೆಗೆ ಅನುಗುಣವಾಗಿ ನೀರು ಮೃದುಗೊಳಿಸುವ ಸ್ಥಾವರ ವ್ಯವಸ್ಥೆ ಮಾಡುವುದು. (**Water Softening Machine**)

20. ಎಲ್ಲಾ ಬಸ್ ಘಟಕಗಳ ಕಟ್ಟಡಗಳಲ್ಲಿ ಸೌರಶಕ್ತಿ ಬೆಳಕಿನ ವ್ಯವಸ್ಥೆ ಮತ್ತು ಸೌರಶಕ್ತಿ ಹೀಟರ್‌ಗಳ ವ್ಯವಸ್ಥೆಯನ್ನು (**Solar Lighting System & Solar Water Heater System**) ಕಲ್ಪಿಸುವುದು.

21. ಜನರೇಟರ್ ಕೊಠಡಿ ಹೊಂದಿರಬೇಕು–10 ಅಡಿ X 12 ಅಡಿ

22. ದಾಖಲಾತಿ ಕೊಠಡಿ ಹೊಂದಿರಬೇಕು – 15 ಅಡಿ X 20 ಅಡಿ

23. ಸರ್ವರ್ ಮತ್ತು ಯುಪಿಎಸ್ ಅಳವಡಿಸಲು ಕೊಠಡಿ ಹೊಂದಿರಬೇಕು. ಲೀವ್ ಕಿಯೋಸ್ಕ್ ಸೌಲಭ್ಯಕ್ಕಾಗಿ ಸಂಚಾರ ಇಲಾಖೆಯ ಮೇಲ್ವಿಚಾರಕರ ಕೊಠಡಿಯಲ್ಲಿ ಲಾನ್ LAN) ಮತ್ತು ಯುಪಿಎಸ್ ಅಳವಡಿಸಲು ಅವಕಾಶ ಕಲ್ಪಿಸಬೇಕು.

(78)

24. ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ವಿಶ್ರಾಂತಿ ಗೃಹ ನಿರ್ಮಿಸಬೇಕಾಗಿರುತ್ತದೆ.
(With attached bath room & toilets)

10. **ಈ ಕಾಮಗಾರಿಯ ಅಂದಾಜು ಮೊತ್ತ ಸುಮಾರು 400.00 ಲಕ್ಷ ರೂ.ಗಳಾಗಿರಬೇಕು.**

**<u>ಋ. ಜಿಲ್ಲಾ ಮಟ್ಟದ ಬಸ್ ಘಟಕಗಳು:</u>**

1. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬಸ್ ಘಟಕಗಳನ್ನು ನಿರ್ಮಿಸುವುದು.
2. ಬಸ್ ಘಟಕಗಳನ್ನು ಕನಿಷ್ಠ 75 ಅನುಸೂಚಿಗಳಿದ್ದಲ್ಲಿ ಮಾತ್ರ ನಿರ್ಮಿಸಲು ಶಿಫಾರಸ್ಸು ಮಾಡಲಾಯಿತು. ಆದಾಗ್ಯೂ ಒಂದು ವೇಳೆ ಹತ್ತಿರದ ಘಟಕ ಅಂದರೆ 40 ರಿಂದ 50 ಕಿ.ಮೀ ಅಂತರದಲ್ಲಿದ್ದು, ಆ ಘಟಕವು 125 ರಿಂದ 150 ಅನುಸೂಚಿಗಳನ್ನು ಹೊಂದಿದಲ್ಲಿ, ಅಂತಹ ಜಿಲ್ಲಾ ಕೇಂದ್ರಗಳಲ್ಲಿ ಬಸ್ ಘಟಕ ಪ್ರಾರಂಭಿಸಲು ಕನಿಷ್ಠ 50 ಅನುಸೂಚಿಗಳನ್ನು ಹೊಂದಿರಬೇಕು.
3. **ಜಿಲ್ಲಾ ಮಟ್ಟದ ಬಸ್ ಘಟಕಕ್ಕೆ ಕನಿಷ್ಠ ಮೂರು ಎಕರೆ ವಿಸ್ತೀರ್ಣದ ನಿವೇಶನವನ್ನು ಪಡೆಯುವುದು.**
4. ಜಿಲ್ಲಾ ಮಟ್ಟದ ಬಸ್ ಘಟಕ ನಿರ್ಮಾಣಕ್ಕಾಗಿ ಉಚಿತವಾಗಿ/ರಿಯಾಯಿತಿ ದರದಲ್ಲಿ ನಿವೇಶನವನ್ನು ಪಡೆಯುವುದು.
5. ಬಸ್ ಘಟಕ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸುವಾಗ ಪ್ರಧಾನ ವ್ಯವಸ್ಥಾಪಕರು(ಸಂಚಾರ), ಮುಖ್ಯ ಅಭಿಯಂತರು, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಮುಖ್ಯ ಯಾಂತ್ರಿಕ ಅಭಿಯಂತರು(ನಿ), ಸಂಬಂಧಪಟ್ಟ ವಿಭಾಗ ನಿಯಂತ್ರಣಾಧಿಕಾರಿಗಳು ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಭಿಯಂತರನ್ನು ಒಳಗೊಂಡ ಸಮಿತಿಯು ನಿವೇಶನವನ್ನು ನಿರ್ಣಯಿಸಿ, ಸೂಕ್ತಾಧಿಕಾರಿಗಳು/ಮಂಡಳಿ ನಿರ್ದೇಶಕರ ಅನುಮೋದನೆಗಾಗಿ ಮಂಡಿಸುವುದು.
6. ಸ್ಥಳೀಯ ಸಂಸ್ಥೆಗಳು ಬಸ್ ಘಟಕ ನಿರ್ಮಿಸಲು ನಿವೇಶನವನ್ನು ಸಮತಟ್ಟು ಮಾಡಿ ಕರಾರಸಾ ನಿಗಮಕ್ಕೆ ಒದಗಿಸಬೇಕಾಗಿರುತ್ತದೆ. ಬಸ್ ನಿಲ್ದಾಣ/ಘಟಕ ಮುಂತಾದವುಗಳ ನಿರ್ಮಾಣಕ್ಕಾಗಿ ನಿವೇಶನಗಳನ್ನು ನೀಡಿದ ಸಂದರ್ಭದಲ್ಲಿ ತಗ್ಗು ಪ್ರದೇಶ, ಎತ್ತರದ ಪ್ರದೇಶ, ಕೆರೆ ಆವರಣ ಮುಂತಾದ ಸಂದರ್ಭಗಳಲ್ಲಿ ತಗಲುವ ಅಭಿವೃದ್ಧಿ ವೆಚ್ಚಗಳನ್ನು ಹಾಗೂ ಹೆಚ್.ಟಿ. ಲೈನ್ ಸ್ಥಳಾಂತರ, ಕೊಳವೆ ಸಾಲುಗಳ ಸ್ಥಳಾಂತರ, ನಿವೇಶನ ಒತ್ತುವರಿ ಮುಂತಾದವುಗಳನ್ನು ಪರಿಶೀಲಿಸಿ ಪಡೆಯುವುದು.
7. ಜಿಲ್ಲಾ ಮಟ್ಟದ ಬಸ್ ಘಟಕಗಳಲ್ಲಿ ಈ ಕೆಳಕಂಡ ಕನಿಷ್ಠ ಸೌಲಭ್ಯಗಳನ್ನು ಒದಗಿಸುವುದು.
    1. ಬಸ್ ಘಟಕಗಳನ್ನು ಕನಿಷ್ಠ 75 ಅನುಸೂಚಿಗಳು ಇದ್ದಲ್ಲಿ ಮಾತ್ರ ನಿರ್ಮಿಸಬೇಕು. ಆದಾಗ್ಯೂ ಒಂದು ವೇಳೆ ಹತ್ತಿರದ ಘಟಕ ಅಂದರೆ 40 ರಿಂದ 50 ಕಿ.ಮೀ ಅಂತರದಲ್ಲಿದ್ದು, ಆ ಘಟಕವು 125 ರಿಂದ 150 ಅನುಸೂಚಿಗಳನ್ನು ಹೊಂದಿದಲ್ಲಿ, ಅಂತಹ ಜಿಲ್ಲಾ ಕೇಂದ್ರಗಳಲ್ಲಿ ಬಸ್ ಘಟಕ ಪ್ರಾರಂಭಿಸಲು ಕನಿಷ್ಠ 50 ಅನುಸೂಚಿಗಳನ್ನು ಹೊಂದಿರಬೇಕು.

2. 100 ಅನುಸೂಚಿಗಳಿಗಿಂತ ಜಾಸ್ತಿ ಆದಲ್ಲಿ ಹೊಸ ಘಟಕ ನಿರ್ಮಿಸುವುದು.
3. ಘಟಕ ವ್ಯವಸ್ಥಾಪಕರು ಕಛೇರಿಯು ಶೌಚಾಲಯವನ್ನೊಳಗೊಂಡಂತೆ ಕನಿಷ್ಟ 12ಅಡಿX15ಅಡಿ ವಿಸ್ತೀರ್ಣ ಇರಬೇಕಾಗಿರುತ್ತದೆ ಹಾಗೂ ಬಸ್ ರಿಪೇರಿ ಅಂಕಣವು ಘಟಕ ವ್ಯವಸ್ಥಾಪಕರಿಗೆ ಕಾಣುವಂತಿರಬೇಕು.
4. ಕನಿಷ್ಟ 2 ಪರಿವೀಕ್ಷಣಾ ಗುಂಡಿಗಳಿರಬೇಕು
5. ಕನಿಷ್ಠ 4 ಬಸ್‌ಗಳಿಗಾಗಿ ಬಸ್ ಡಾಕಿಂಗ್ ಬೇಗಳು ಒಳಗೊಂಡಿರಬೇಕು
6. ಬಸ್ ಘಟಕದ ನಿವೇಶನವು ಬಸ್ ನಿಲ್ದಾಣದಿಂದ 2 ರಿಂದ 4 ಕಿ.ಮೀ ಅಂತರದಲ್ಲಿ ಲಭ್ಯವಿರಬೇಕು.
7. ನಗದು ಶಾಖೆ & ಇಕ್ವಿಪ್‌ಮೆಂಟ್ ಶಾಖೆಯನ್ನು ಹೊಂದಿರಬೇಕು–20ಅಡಿ X 24 ಅಡಿ
8. ಟೈರ್ ಕೊಠಡಿಯನ್ನು ಹೊಂದಿರಬೇಕು–10 ಅಡಿ X 12 ಅಡಿ
9. ವೆಲ್ಡಿಂಗ್ ಕೊಠಡಿಯನ್ನು ಹೊಂದಿರಬೇಕು–10 ಅಡಿ X 12 ಅಡಿ
10. ಬ್ಯಾಟರಿ ಕೊಠಡಿಯನ್ನು ಹೊಂದಿರಬೇಕು – 10 ಅಡಿ X 12 ಅಡಿ
11. ಶಿಫ್ಟ್ ಕೊಠಡಿಯನ್ನು ಹೊಂದಿರಬೇಕು– 10 ಅಡಿ X 12 ಅಡಿ
12. ವಾಚ್ & ವಾರ್ಡ್/ಭದ್ರತಾ ಕೊಠಡಿ ಹೊಂದಿರಬೇಕು– 10 ಅಡಿ X 12 ಅಡಿ
13. ಸಂಪ್/ಟ್ಯಾಂಕ್ ಹೊಂದಿರಬೇಕು– 25,000 ಲೀಟರ್ ಸಾಮರ್ಥ್ಯ
14. ಡೀಸೆಲ್/ಫ್ಯುಯಲ್ ಕೊಠಡಿ ಹೊಂದಿರಬೇಕು– 10 ಅಡಿ X 10 ಅಡಿ
15. ಕಾರ್ ವಾಶಿಂಗ್ ಕೊಠಡಿಯೊಂದಿಗೆ ವಾಶಿಂಗ್ ಪ್ಲಾಟ್‌ಫಾರಂ– 10 ಅಡಿ X 10 ಅಡಿ
16. ಎಲ್ಲಾ ಬಸ್ ಘಟಕ/ವಿಭಾಗೀಯ ಕಾರ್ಯಾಗಾರ ಮತ್ತು ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ತ್ಯಾಜ್ಯ **ನೀರು ಸಂಸ್ಕರಣಾ ಸ್ಥಾವರವನ್ನು (Effluent Treatment Plant) ಸ್ಥಾಪಿಸುವುದು. ಈ ಸ್ಥಾವರದಿಂದ ಹೊರಬರುವ ನೀರಿನ ಗುಣಮಟ್ಟವು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗೆ ಒಳಪಟ್ಟಿರಬೇಕು.**
17. ಮಹಿಳೆಯರಿಗೆ ಮತ್ತು ಪುರುಷರಿಗಾಗಿ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇರಬೇಕು.
18. **ಎಲ್ಲಾ ಬಸ್ ಘಟಕಗಳ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು (Rain Water Harvesting) ಮತ್ತು ಮಳೆ ನೀರು ಪುನರ್ ಬಳಕೆ/ಮಳೆ ನೀರು ಸಂಗ್ರಹಣಾ ಘಟಕ ಹೊಂದಿರಬೇಕು.**
19. **ಕೊಳವೆ ಬಾವಿ ನೀರು/ ಪುರಸಭಾ ನೀರಿನ ಗಡುಸತ್ವ 50 ಪಿಪಿಎಂಗಿಂತ ಹೆಚ್ಚು ಇದ್ದಲ್ಲಿ ಅವಶ್ಯಕತೆಗೆ ಅನುಗುಣವಾಗಿ ನೀರು ಮೃದುಗೊಳಿಸುವ ಸ್ಥಾವರ ವ್ಯವಸ್ಥೆ ಮಾಡುವುದು. (Water Softening Machine)**

20. ಎಲ್ಲಾ ಬಸ್ ಘಟಕಗಳ ಕಟ್ಟಡಗಳಲ್ಲಿ ಸೌರಶಕ್ತಿ ಬೆಳಕಿನ ವ್ಯವಸ್ಥೆ ಮತ್ತು ಸೌರಶಕ್ತಿ ಹೀಟರ್‌ಗಳ ವ್ಯವಸ್ಥೆಯನ್ನು **(Solar Lighting System & Solar Water Heater System)** ಕಲ್ಪಿಸುವುದು.
21. ಜನರೇಟರ್ ಕೊಠಡಿ ಹೊಂದಿರಬೇಕು-10 ಅಡಿ X 12 ಅಡಿ
22. ದಾಖಲಾತಿ ಕೊಠಡಿ ಹೊಂದಿರಬೇಕು – 15 ಅಡಿ X 20 ಅಡಿ
23. ಸರ್ವರ್ ಮತ್ತು ಯುಪಿಎಸ್ ಅಳವಡಿಸಲು ಕೊಠಡಿ ಹೊಂದಿರಬೇಕು. ಲೀವ್ ಕಿಯೋಸ್ಕ್ ಸೌಲಭ್ಯಕ್ಕಾಗಿ ಸಂಚಾರ ಇಲಾಖೆಯ ಮೇಲ್ವಿಚಾರಕರ ಕೊಠಡಿಯಲ್ಲಿ ಲಾನ್ LAN) ಮತ್ತು ಯುಪಿಎಸ್ ಅಳವಡಿಸಲು ಅವಕಾಶ ಕಲ್ಪಿಸಬೇಕು.
24. ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ವಿಶ್ರಾಂತಿ ಗೃಹ ನಿರ್ಮಿಸಬೇಕಾಗಿರುತ್ತದೆ. (With attached bath room & toilets)

8. **ಈ ಕಾಮಗಾರಿಯ ಅಂದಾಜು ಮೊತ್ತ ಸುಮಾರು 400.00 ಲಕ್ಷ ರೂ.ಗಳಾಗಿರಬೇಕು (2015-16ನೇ ಸಾಲಿನ ಎಸ್.ಆರ್.ದರಗಳಂತೆ ಪರಿಗಣಿಸಲಾಗಿದೆ).**

**<u>ಇ. ವಿಭಾಗೀಯ ಕಛೇರಿಯನ್ನು ಪ್ರಾರಂಭಿಸುವುದು:</u>**

ವಿಭಾಗೀಯ ಕಛೇರಿಯನ್ನು ನಿರ್ಮಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವುದು:

1. ವಿಭಾಗೀಯ ಕಛೇರಿಯನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಕನಿಷ್ಠ 450 ಅನುಸೂಚಿಗಳ ಅವಶ್ಯಕತೆ ಇರುತ್ತದೆ.
2. ವಿಭಾಗೀಯ ಕಛೇರಿಯ ವ್ಯಾಪ್ತಿಯಲ್ಲಿ ಕನಿಷ್ಠ 05 ಬಸ್ ಘಟಕಗಳನ್ನು ಹೊಂದಿರಬೇಕು.
3. ವಿಭಾಗಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಸ್ಥಾಪಿಸುವುದು.
4. ವಿಭಾಗೀಯ ಕಛೇರಿಗಾಗಿ ಸೂಕ್ತ ಕಟ್ಟಡ ಅಥವಾ ಕಟ್ಟಡ ನಿರ್ಮಾಣಕ್ಕಾಗಿ ಅವಶ್ಯವಿರುವ ನಿವೇಶನವನ್ನು **(ಕನಿಷ್ಠ 2 ಎಕರೆ ವಿಸ್ತೀರ್ಣ)** ಸಂಸ್ಥೆಯು ಹೊಂದಿರಬೇಕು. ವಿಭಾಗೀಯ ಕಾರ್ಯಾಗಾರ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ **(ಕನಿಷ್ಠ 5 ಎಕರೆ ವಿಸ್ತೀರ್ಣ)** ಹೊಂದಿರಬೇಕು.
5. ವಿಭಾಗೀಯ ಕಛೇರಿಗಳಿಗಾಗಿ ನಿವೇಶನಗಳನ್ನು ಪಡೆಯುವ ಸಂದರ್ಭಗಳಲ್ಲಿ ಪ್ರಧಾನ ವ್ಯವಸ್ಥಾಪಕರು(ಸಂಚಾರ), ಮುಖ್ಯ ಕಾಮಗಾರಿ ಅಭಿಯಂತರು, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಮುಖ್ಯ ತಾಂತ್ರಿಕ ಶಿಲ್ಪಿ(ನಿ), ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಸಂಬಂಧಪಟ್ಟ ವಿಭಾಗ ನಿಯಂತ್ರಣಾಧಿಕಾರಿಗಳು, ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಭಿಯಂತರನ್ನೊಳಗೊಂಡ ಸಮಿತಿಯು ನಿವೇಶನದ ಸೂಕ್ತಾಸೂಕ್ತತೆ ಹಾಗೂ ಸಾಧಕ ಬಾಧಕಗಳನ್ನು ಪರಿಶೀಲಿಸಿ. ನಿವೇಶನವನ್ನು ನಿರ್ಧರಿಸಿ ಸೂಕ್ತಾಧಿಕಾರಿಗಳು/ಮಂಡಳಿ ನಿರ್ದೇಶಕರ ಅನುಮೋದನೆಗಾಗಿ ಮಂಡಿಸುವುದು.

6. ವಿಭಾಗೀಯ ಕಛೇರಿಯ ಸ್ಥಾಪನೆಗಾಗಿ ಸ್ವಂತ ಕಟ್ಟಡ ನಿರ್ಮಾಣವಾಗುವವರೆಗೆ ಪ್ರಧಾನ ವ್ಯವಸ್ಥಾಪಕರು(ಸಂಚಾರ), ಮುಖ್ಯ ಕಾಮಗಾರಿ ಅಭಿಯಂತರು, ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಮುಖ್ಯ ತಾಂತ್ರಿಕ ಶಿಲ್ಪಿ(ನಿ), ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಸಂಬಂಧಪಟ್ಟ ವಿಭಾಗ ನಿಯಂತ್ರಣಾಧಿಕಾರಿಗಳು, ಮತ್ತು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಅಭಿಯಂತರನ್ನೊಳಗೊಂಡ ಸಮಿತಿಯು ಬಾಡಿಗೆ ಕಟ್ಟಡವನ್ನು ಗುರುತಿಸಿ, ಸಾಧಕ ಬಾಧಕಗಳನ್ನು ಪರಿಶೀಲಿಸಿ ಬಾಡಿಗೆಯನ್ನು ನಿರ್ಧರಿಸಿ ಸೂಕ್ತಾಧಿಕಾರಿಗಳು/ಮಂಡಳಿ ನಿರ್ದೇಶಕರ ಅನುಮೋದನೆಗಾಗಿ ಮಂಡಿಸುವುದು.

7. ನೂತನ ವಿಭಾಗ ಸ್ಥಾಪಿಸುವಾಗ ಸದರಿ ವಿಭಾಗದ ವ್ಯಾಪ್ತಿಗೆ ಒಳಪಡುವ ಘಟಕಗಳು ಆಯಾ ಜಿಲ್ಲಾ ಕೇಂದ್ರಗಳ ವ್ಯಾಪ್ತಿಯಲ್ಲಿಯೇ ಇರಬೇಕು.

**8. ಎಲ್ಲಾ ವಿಭಾಗೀಯ ಕಛೇರಿಗಳಲ್ಲಿ ಮಳೆ ನೀರು ಕೊಯ್ಲು (Rain Water Harvesting) ಮತ್ತು ಮಳೆ ನೀರು ಪುನರ್ ಬಳಕೆ/ಮಳೆ ನೀರು ಸಂಗ್ರಹಣಾ ಘಟಕ ಹೊಂದಿರಬೇಕು.**

**9. ಎಲ್ಲಾ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು (Rain Water Harvesting) ನಿರ್ಮಿಸುವುದು.**

**10. ಎಲ್ಲಾ ಕಟ್ಟಡಗಳಲ್ಲಿ ಸೌರಶಕ್ತಿ ಬೆಳಕಿನ ವ್ಯವಸ್ಥೆ ಮತ್ತು ಸೌರಶಕ್ತಿ ಹೀಟರ್‌ಗಳ ವ್ಯವಸ್ಥೆಯನ್ನು (Solar Lighting System & Solar Water Heater System) ಕಲ್ಪಿಸುವುದು.**

11. ಪ್ರಸ್ತಾಪಿತ ವಿಭಾಗೀಯ ಕೇಂದ್ರವು ಉದ್ದೇಶಿತ ಘಟಕಗಳಿಗೆ ಆದಷ್ಟು ಸಮೀಪದಲ್ಲಿ ಇರಬೇಕು.

12. ಈ ಕಾಮಗಾರಿಯ ಅಂದಾಜು ಮೊತ್ತ ಸುಮಾರು 250.00 ಲಕ್ಷ ರೂ.ಗಳಾಗಿರಬೇಕು

(signature)
ವ್ಯವಸ್ಥಾಪಕ ನಿರ್ದೇಶಕರು.
ಕ.ರಾ.ರ.ಸಾ.ನಿಗಮ.

**ಪ್ರತಿಯನ್ನು:**

1. ಹಿರಿಯ/ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು(ಸಿ&ಪ)/ ನಿರ್ದೇಶಕರು(ಭ&ಜಾ), ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಹಿರಿಯ/ಆಪ್ತ ಕಾರ್ಯದರ್ಶಿಗಳು, ಪ್ರಧಾನ ವ್ಯವಸ್ಥಾಪಕರು(ಸಂಚಾರ)/ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಹಿರಿಯ/ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ನ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
4. ಹಿರಿಯ/ಆಪ್ತ ಕಾರ್ಯದರ್ಶಿಗಳು, ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) / ಪ್ರಧಾನ ವ್ಯವಸ್ಥಾಪಕರು (ಸಂಚಾರ) / ಮುಖ್ಯ ಕಾಮಗಾರಿ ಅಭಿಯಂತರರು, ಬೆಂ.ಮ.ನ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಹಿರಿಯ/ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರಿಗೆ ಮಾಹಿತಿಗಾಗಿ.
6. ಹಿರಿಯ/ಆಪ್ತ ಕಾರ್ಯದರ್ಶಿಗಳು, ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)/ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ)/ಮುಖ್ಯ ಕಾಮಗಾರಿ ಅಭಿಯಂತರರು, ವಾ.ಕ.ರ.ಸಾ.ಸಂಸ್ಥೆ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.